6. ಶಾಸನ ರಚನೆ

ಅ) ವಿಧೇಯಕವನ್ನು ಮಂಡಿಸುವುದು.

(i) ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ-2000 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಡಿ.ಬಿ.ಚಂದ್ರೇಗೌಡ(ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು)(ಶ್ರೀ ಡಿ.ಕೆ.ಶಿವಕುಮಾರ್, ಸಹಕಾರ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೇ, ''2000ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.''

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

''2000ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಬಿ.ಚಂದ್ರೇಗೌಡ(ಮಾನ್ಯ ಕಾನೂನುಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ''2000ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.''

ಅಧ್ಯಕ್ಷರು: X ವಿಧೇಯಕವನ್ನು ಮಂಡಿಸಲಾಗಿದೆ. X

ಪರ್ಯಾಲೋಚನಾ ಪ್ರಸ್ತಾವ.

(i) ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕ-2001

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೇ, ಗೆಳೆಯ ಶ್ರೀ ರಾಮದಾಸ್‌ರವರಿಗೆ ನಾನು ನಿನ್ನೆಯೇ ಹೇಳಿದೆ, ತುಂಬಾ ಕಳ್ಳತನವಾಗುತ್ತಾ ಇದೆ, ಅದನ್ನು ತಪ್ಪಿಸುವುದಕ್ಕಾಗಿ ಕೆಲವು ಹೊಸ ನಿಯಮಗಳನ್ನು ರೂಪಿಸಿದ್ದೇವೆ. ''ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ'' ಈ

X ಅನುಬಂಧ -I

ಉದುರುವುದಿಲ್ಲವೆಂಬುದು ಅನುಭವದ ಮಾತು. ಈ ಅನುಭವದ ಮೇಲೆ ಈ ಶಾಸನದಲ್ಲಿ ಸ್ವಲ್ಪ ಬಿಗಿ ಮಾಡತಕ್ಕಂಥ ತಿದ್ದುಪಡಿಗಳನ್ನು ತಂದಿದ್ದೇವೆ. ಇದರಲ್ಲಿ ವಿಶೇಷವೇನೂ ಇಲ್ಲವೆಂಬ ಮಾತನ್ನು ಹೇಳಿದ್ದೇವೆ. ಆದರೂ ಚರ್ಚೆ ಮಾಡಬೇಕೆಂದು ಹೇಳಿದರು. ಅವರು ಚರ್ಚೆ ಮಾಡುವ ಹಾಗಿದ್ದರೆ ಮಾಡಲಿ.

+ ಶ್ರೀ ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಒಳ್ಳೆಯ ವಿಚಾರಗಳು ಬಂದಾಗ ಈ ಕಡೆಯ ಗ್ಯಾಲರಿಯಲ್ಲಿ ಕುಳಿತಿರುವ ನಾವೆಲ್ಲರೂ ಒಪ್ಪುತ್ತೇವೆ. ಆದರೆ ಈ ಬಿಲ್ ಸರ್ಕಾರಕ್ಕೆ ಮಾರಕವಾಗಿರುವುದು ಎಂದು ನಾವೆಷ್ಟೇ ಹೇಳಿದರೂ ಕೂಡ ಮಾನ್ಯ ಕಾನೂನು ಮಂತ್ರಿಗಳು ಏಕೆ ಅರ್ಥಮಾಡಿಕೊಳ್ಳುವುದಿಲ್ಲವೋ ನನಗಂತೂ ಗೊತ್ತಿಲ್ಲ. ನಾವು ಒಳ್ಳೆಯ ವಿಚಾರಗಳನ್ನು ಹೇಳುವಂಥ ಸಂದರ್ಭದಲ್ಲಾದರೂ ಕೂಡ ಕೇಳುವಂಥ ಹೃದಯ ವಿಶಾಲತೆ ನಿಮ್ಮಲ್ಲಿರಬೇಕೆಂಬುದು ನನ್ನ ಮನವಿ. 1910ನೇ ಇಸವಿಯಲ್ಲಿದ್ದಂತಹ ಕರ್ನಾಟಕ ಎಲೆಕ್ಟ್ರಿಸಿಟಿ ಆಕ್ಟ್‌ಗೆ ಸಂಬಂಧಪಟ್ಟಂತೆ, ಬಹಳ ವರ್ಷಗಳನಂತರ ತಿದ್ದುಪಡಿಯನ್ನು ತರುವಂಥ ಪ್ರಯತ್ನವನ್ನು ಮಾಡಿದ್ದಾರೆ. ಇದನ್ನು ಯಾವಾಗಲೋ ಮಾಡಬೇಕಾದ ಅವಶ್ಯಕತೆ ಇತ್ತು. ಆದರೆ, ಈಗ ಪ್ರಾರಂಭ ಮಾಡಿದ್ದಾರೆ. ಆದರೆ, ಒಂದು ವಿಚಾರ ಇದಕ್ಕೆ ಸಂಬಂಧಪಟ್ಟ ಹಾಗೆ, ಬಹಳ ದಿವಸಗಳ ಕಾಲ ವಿಶೇಷವಾಗಿ ಪೌರ ಮಿನಿಸ್ಟರುಗಳ ಸಮ್ಮೇಳನದಲ್ಲಿ, ಎಲ್ಲಾಕಡೆಯೂ ಚರ್ಚೆಯಾಗಿ ಕೇಂದ್ರ ಸರ್ಕಾರವನ್ನು ಎಲ್ಲಾ ಮಂತ್ರಿಗಳೂ ಎಲ್ಲಾ ರಾಜ್ಯದಿಂದ ಒತ್ತಾಯವನ್ನು ಮಾಡಿದ್ದರು. ಇದಕ್ಕೆ ಸಂಪೂರ್ಣವಾದಂತಹ ಮತ್ತು ಇವತ್ತಿನ ವ್ಯವಸ್ಥೆಗೆ ತಕ್ಕ ರೀತಿಯಲ್ಲಿ ಇರುವಂಥ ಹೊಸ ಆಕ್ಟ್ ಬರುವಂಥ ಅವಶ್ಯಕತೆ ಇದೆ ಎಂಬುದನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದರು.

1.10 ಪಿಎಂ

ಭಾರತ ಸರ್ಕಾರ ಒಂದು ಆರ್ಡಿನೆನ್ಸ್‌ನ್ನು ಈಗಾಗಲೇ ಹೊರಡಿಸಿದೆ. ಇಂಡಿಯನ್ ಎಲೆಕ್ಟ್ರಿಸಿಟಿ ಬಿಲ್ 2001, ಇದಕ್ಕೆ ಸಂಬಂಧಪಟ್ಟಂತೆ ಒಂದು ಆರ್ಡಿನೆನ್ಸ್ ಈಗಾಗಲೇ ಜಾರಿಗೆ ಬಂದಿದ್ದು, ಇದನ್ನು ಪ್ರಸ್ತುತ ಪಾರ್ಲಿಮೆಂಟ್‌ನಲ್ಲಿ ಮಂಡಿಸಲಾಗಿದೆ. ಇಡೀ ಭಾರತ ದೇಶಕ್ಕೆ ಸಂಬಂಧಪಟ್ಟಂತಹ ಈ ಎಲೆಕ್ಟ್ರಿಸಿಟಿ ಬಿಲ್ ಏನು ಇದೆ ಅದಕ್ಕೆ ಸಂಬಂಧಪಟ್ಟಂತೆ ಪೂರಕವಾದ ರೀತಿಯಲ್ಲಿ ವಿಶೇಷವಾಗಿ ಆ ಬಿಲ್‌ನಲ್ಲಿರುವಂತಹ ವಿಚಾರಗಳನ್ನು ಅಳವಡಿಸಿಕೊಳ್ಳುವುದು ಪ್ರತಿಯೊಂದು ರಾಜ್ಯದ ಕರ್ತವ್ಯವಾಗಿರುವುದರಿಂದ ಅದರ ಸಂಪೂರ್ಣವಾದ ವಿಚಾರಗಳನ್ನು ಅಳವಡಿಸಿಕೊಳ್ಳುವುದಕ್ಕೆ ಬೇಕಾಗಿರುವಂತಹ ವಿಚಾರಗಳನ್ನು ಮಾಡುವುದು ಸೂಕ್ತವೆಂದು ನನಗನ್ನಿಸುತ್ತದೆ. ಕಾರಣ ಇಡೀ ದೇಶದಲ್ಲಿ ಈ ಒಂದು ಆಕ್ಟ್‌ನಲ್ಲಿ ಇಡೀ ಭಾರತ ದೇಶಕ್ಕೆ ಇದು ಅನ್ವಯವಾಗುವಂತಹ ದೃಷ್ಟಿಯಲ್ಲಿ ಅದೂ ಈ ರಾಜ್ಯಕ್ಕೂ

ಅನ್ವಯವಾಗುವ ದೃಷ್ಟಿಯಿಂದ ಬಹಳ ಮೂಲಭೂತವಾದಂತಹ ಕೆಲವು ಅಂಶಗಳು ಅದರಲ್ಲಿವೆ. ಆ ದೃಷ್ಟಿಯಿಂದ ಅದು ಸಾಕಾಗಬಹುದು ಎಂದು ನನಗನ್ನಿಸುತ್ತದೆ. ಆದರೂ ತಾವು ವಿಶೇಷವಾಗಿ ಒಂದು ಆಕ್ಟ್‌ನ್ನು ತಂದಿದ್ದೀರಿ. ಇಲ್ಲಿ ಜುಲೈ 31, 2000ನೇ ಇಸವಿಯಲ್ಲಿ ಆಂಧ್ರಪ್ರದೇಶದಲ್ಲಿ ಇಂಥಾದ್ದೇ ಒಂದು ಬಿಲ್ ತಂದಂತಹ ಸಂದರ್ಭದಲ್ಲಿ ಆಂಧ್ರಪ್ರದೇಶ ಆಕ್ಟ್ ಅಂಡ್ ರೆಗ್ಯುಲೇಷನ್ಸ್ ಎಂದು ಏನು ಇದೆ ಅದು ಆಕ್ಟ್ ಆಗಿ ಪರಿವರ್ತನೆಯಾದ ಮೇಲೆ ಏನೂ ಬದಲಾವಣೆ ಇಲ್ಲದೆ ಆಂಧ್ರಪ್ರದೇಶದಲ್ಲಿ ಏನೊಂದು ಆಕ್ಟ್ ತಂದಿದ್ದಾರೆ 'ಆಂಧ್ರಪ್ರದೇಶ' ಎಂದು ಇರುವಂತಹ ಜಾಗದಲ್ಲಿ 'ಕರ್ನಾಟಕ' ಎಂದು ಸೇರಿಸಿ ತಂದಿರುವಂತಹ ಒಂದು ಬಿಲ್ ಇದೆ. ಆದರೆ ಎಲ್ಲವನ್ನೂ ಹಾಗೆಯೇ ತಿಳವಡಿಸಿದ್ದರೆ ಸರಿ ಹೋಗುತ್ತಿತ್ತು. ಆದರೆ ಅದರಲ್ಲಿ ಎರಡು, ಮೂರು ಬದಲಾವಣೆಗಳನ್ನು ಮಾಡಿರುವುದನ್ನು ಇಲ್ಲಿ ನಾವು ಕಾಣುತ್ತಿದ್ದೇವೆ. ಆ ಬದಲಾವಣೆಯನ್ನು ಏಕೆ ಮಾಡಿದಿರಿ ಎಂದು ನಾನು ತಮ್ಮನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಮೊದಲನೆಯದು ಸೆಕ್ಷನ್ 49(ಸಿ) ಇದಕ್ಕೆ ಸಂಬಂಧಪಟ್ಟ ಹಾಗೆ

"For the purposes of providing speedy trial of the offences under this Act and for determining compensation to be awarded to the Electricity Utility, the State Government may, with the concurrence of the High Court of Karnataka, by notification, specify for each district or two or more districts, a court of District and Session Judge to be a Special Court."

ಇಲ್ಲಿ ಪ್ರಶ್ನೆ ಇರುವಂಥಾದ್ದು ಬಹಳ ಒಳ್ಳೆಯದು. ನೀವು ಮಾಡಿರುವಂತಹ ಅಂಶ ಏನು ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಅಥವಾ ಸೆಷನ್ಸ್ ಜಡ್ಜನ್ನು ಈ ಒಂದು ಸ್ಪೆಷಲ್ ಕೋರ್ಟ್ ಎಂದು ಮಾಡಿ ಅದಕ್ಕೆ ನೇಮಕ ಮಾಡುವಂತಹ ವ್ಯವಸ್ಥೆಯನ್ನು ಮಾಡಿದ್ದೀರಿ. ಆದರೆ ಪ್ರಮುಖವಾದ ಒಂದು ಅಂಶ ಇಲ್ಲಿ ಕೇವಲ ಎರಡು ಜಿಲ್ಲೆಗಳಿಗೆ ಮೂರು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಒಂದು ಕೋರ್ಟ್‌ನ್ನು ನೇಮಕ ಮಾಡಿದರೂ ಕೂಡ ವಿಶೇಷವಾಗಿ ಇದರಲ್ಲಿ ಒಂದು ಟೆಕ್ನಿಕಲ್ ವಿಚಾರ ಇದೆ. ಕಳ್ಳತನ ಮಾಡಿಕೊಂಡು ಬಂದರು ಅಂದರೆ ಅದನ್ನು ಯಾರೋ ಎಲ್ಲೋ ಇಟ್ಟುಕೊಂಡಿದ್ದಾರೆ ಎಂದು ಹೇಳಬಹುದು. ವಿದ್ಯುತ್ತನ್ನು ಕಳ್ಳತನ ಮಾಡಿಕೊಂಡು ಬಂದು ಯಾರು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ವಿದ್ಯುತ್ತನ್ನು ಕಳ್ಳತನ ಮಾಡಬೇಕಾದರೆ ವಿಶೇಷವಾಗಿ ಅದಕ್ಕೆ ಟೆಕ್ನಿಕಲ್ ಹ್ಯಾಂಡ್ಸ್ ಯಾರು ಇದ್ದಾರೋ ಅವರೇ ಕಳ್ಳತನ ಮಾಡುವುದಕ್ಕೆ ಸಾಧ್ಯವಿದೆ. ವಿಶೇಷವಾಗಿ ನ್ಯಾಯಾಲಯದಲ್ಲಿ ಇಷ್ಟು ವರ್ಷಗಳ ಅನುಭವದಲ್ಲಿ ನಾನು ಈ ಸರ್ಕಾರ ಆ ಸರ್ಕಾರ

ಎಂದು ಹೇಳುತ್ತಿಲ್ಲ. ಏಕೇಷವಾಗಿ ವಿದ್ಯುತ್ತಿನ ಕಳ್ಳತನಕ್ಕೆ ಸಂಬಂಧಪಟ್ಟ ಹಾಗೆ ಕಾಗ್ನಿಸಬಲ್ ಆಫೆನ್ಸ್ ಇರಬಹುದು, ನಾನ್‌ಕಾಗ್ನಿಸಬಲ್ ಆಫೆನ್ಸ್ ಇರಬಹುದು, ಇವು ಎರಡಕ್ಕೂ ಸಂಬಂಧಪಟ್ಟ ಹಾಗೆ ನ್ಯಾಯಾಲಯದಲ್ಲಿ ಹೂಡಿರುವ ದಾವೆಗಳಲ್ಲಿ ಕೇಕಡ 5 ರಿಂದ 10 ಪರ್ಸೆಂಟ್ ಸಹ ಸ್ಟ್ಯಾಂಡ್ ಆಗಿಲ್ಲ. ಸರ್ಕಾರದ ಪರವಾಗಿ ನ್ಯಾಯಾಲಯ ತೀರ್ಪನ್ನು ಕೊಡಲಿಕ್ಕೆ ಆಗಲಿಲ್ಲ. ಕಾರಣವೇನೆಂದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಟೆಕ್ನಿಕಲ್ ಪ್ರಾಬ್ಲಮ್ಸ್ ಇರುತ್ತದೆ. ಹಾಗಾಗಿ ನನ್ನ ಒಂದು ಮನವಿ ಏನೆಂದರೆ, ಇದರಲ್ಲಿ ಆಂಧ್ರಪ್ರದೇಶದಲ್ಲಿ ಈಗಾಗಲೇ ಆ ವ್ಯವಸ್ಥೆಯನ್ನು ತಂದ ರೀತಿಯಲ್ಲಿಯೇ ಎಷ್ಟು ಅಮೌಂಟ್‌ನಷ್ಟು ವಿದ್ಯುತ್ ಥೆಫ್ಟ್ ಆಗಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ಬ್ಯಾಕ್‌ಬಿಲ್ಲಿಂಗ್ ಇರಬಹುದು ಇದಕ್ಕೆ ಸಂಬಂಧಪಟ್ಟಂತೆ ಒಂದು ಅಂಶದಲ್ಲಿ ಅಲ್ಲಿ ಏನು ಅವಾರ್ಡ್ ಇರುತ್ತದೆ ಅದರ ಹಣ, value upto 5 ಲಕ್ಷ ರೂ.ವರೆಗೆ ಏನು ಒಂದು ಅವಾರ್ಡ್‌ನ ಅಂಶ ಇದೆ ಅಂದರೆ ಥೆಫ್ಟ್‌ನ ಹಣ ಇದೆ ಅಷ್ಟರವರೆಗೆ ಬರುವಂತಹ ಹಣದ ಕೇಸ್‌ಗಳನ್ನು ಇವತ್ತು ಸ್ಪೆಷಲ್ ಟ್ರಿಬ್ಯುನಲ್‌ಗಳ ಮಾದರಿಯಲ್ಲಿ ರಚನೆ ಮಾಡಿ ಆ ಟ್ರಿಬ್ಯೂನಲ್‌ಗಳಿಗೆ ಕೊಡುವಂತಹ ಕೆಲಸ ಮಾಡಿದ್ದಾರೆ. ಏಕೆ ಇದು ಪ್ರಮುಖವಾದ ಅಂಶ ಅಂದರೆ ಸ್ಪೆಷಲ್ ಕೋರ್ಟ್‌ಗೂ ಟ್ರಿಬ್ಯುನಲ್‌ಗೂ ಇರುವಂತಹ ವ್ಯತ್ಯಾಸವೇನು? ನೀವು ಒಬ್ಬ ಸೆಷನ್ಸ್ ಜಡ್ಜನ್ನು ಅದಕ್ಕೆ ನೇಮಕ ಮಾಡುತ್ತಿದ್ದೀರಿ. ಸೆಷನ್ಸ್ ಜಡ್ಜ್‌ಗೆ ಕಾನೂನಿನ ಪ್ರಕಾರದಲ್ಲಿ ಒಬ್ಬ ಜುಡಿಷಿಯರಿ ಮೆಂಬರ್ ಆಗಿ ಅವರು ಕಾನೂನಿನ ಚೌಕಟ್ಟಿನಲ್ಲಿ ಏನನ್ನು ಮಾಡಬಹುದೋ ಅದನ್ನು ಮಾಡುವುದಕ್ಕೆ ಸಾಧ್ಯವಿದೆ. ಆದರೆ ಒಬ್ಬ ಟೆಕ್ನಿಕಲ್ ಮೆಂಬರ್ ಆಗಿ ಒಬ್ಬ ಟೆಕ್ನಿಕಲ್ ವ್ಯಕ್ತಿಯಾಗಿ ಕಳ್ಳತನದ ವ್ಯವಸ್ಥೆಯನ್ನು ಪರಿಶೀಲನೆ ಮಾಡಬಹುದು. ನಾನು ಈಗಾಗಲೇ ಈ ಹಿಂದೆ ಒಂದು ವಿಚಾರವನ್ನು ಹೇಳಿದ್ದೆ. ಒಂದು ಐ.ಎಸ್.ಐ. ಅಕ್ಕಪಟ್ಟ ಇರುವಂತಹ ಒಂದು ವ್ಯವಸ್ಥೆಯಲ್ಲಿ ಒಂದು ಸಣ್ಣ ಡಿವೈಜರ್‌ನ್ನು ಕಾರ್ಖಾನೆಯ ಒಂದು ಮೂಲೆಯಲ್ಲಿ ಆ ಎಲೆಕ್ಟ್ರಾನಿಕ್ ಡಿವೈಸರ್‌ನ್ನು ಇಟ್ಟು ಆ ಡಿವೈಸರ್ ಆನ್ ಮಾಡಿದ ತಕ್ಷಣವೇ ಅದು ಮೋಟರನ್ನು ಬಿಟ್ಟು ಬೇರೆ ರೀತಿಯಲ್ಲಿ ದುರುಪಯೋಗ ಮಾಡುವಂಥಾದ್ದನ್ನು ಮಾಡಬಹುದು. ವಿದ್ಯುತ್ ಕಳ್ಳತನ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಅಲ್ಲಿನ ಸಿಗ್ನಲ್ ಕೊಡುವುದಕ್ಕಾಗಿ ಆ ಥೇರ್ಮನ್ ತನ್ನ ಕೊಠಡಿಯಲ್ಲಿ ಒಂದು ಲೈಟ್ ಇಟ್ಟುಕೊಂಡಿದ್ದ, ಆ ಲೈಟ್ ಆರಿದರೆ ಆ ಮೋಟರ್ ಓಡುತ್ತಿದೆ ಅಂತ, ಲೈಟ್ ಆರದೇ ಹೋದರೆ ಆ ಮೋಟರ್ ಓಡುತ್ತಿಲ್ಲ ಅಂತ. ಈ ರೀತಿಯಾದ ಎಲೆಕ್ಟ್ರಾನಿಕ್ ಡಿವೈಸರ್ ಅನ್ನು ಈ ರಾಜ್ಯದಲ್ಲಿ ನಾವು ಬಳಸಿದ್ದು ನೋಡಿದ್ದೇವೆ. ಇದು ಟೆಕ್ನಿಕಲ್ ವಿಚಾರ. ಹಾಗಾಗಿ ಎಲ್ಲಾ ಜ್ಯುಡಿಷಿಯಲ್ ಜಡ್ಜ್‌ಗಳಿಗೂ ಇದರ ಬಗ್ಗೆ ಅಲೋಚನೆಯನ್ನೂ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಅಲ್ಲ. ಒಂದು ಟ್ರಿಬ್ಯುನಲ್ ನೇಮಕ ಮಾಡಿ ಎಂದು ಹೇಳುತ್ತೇನೆ ಅಂದರೆ ಮೂರು ಜನ ಸದಸ್ಯರು ಅಲ್ಲಿ ಇರುತ್ತಾರೆ. ಅದರಲ್ಲಿ ಒಬ್ಬರು ಜ್ಯುಡಿಷಿಯಲ್ ಮೆಂಬರ್. ಟೆಕ್ನಿಕಲ್ ಮೆಂಬರ್ ಒಬ್ಬರು ಇರುತ್ತಾರೆ. ಹಾಗೂ ಕಾನೂನಿನ

ಚೌಕಟ್ಟಿನೊಳಗೆ ಈ ರೀತಿಯಾಗುವಂತಹ ಎಲ್ಲಾ ಪ್ರಕಾರಗಳಿಗೆ ಸಂಬಂಧಪಟ್ಟ ಹಾಗೆ ಒಬ್ಬ ರಿಟೈರ್ಡ್ ಚೀಫ್ ಇಂಜಿನೀಯರ್ ಇದಕ್ಕೆ ಸಂಬಂಧಪಟ್ಟ ಹಾಗೆ ಸೇವೆ ಮಾಡುವವರು ಯಾರಾದರೂ ಒಬ್ಬ ವ್ಯಕ್ತಿ ಇರುತ್ತಾರೆ. ಈ ರೀತಿಯಾಗಿ 5 ಲಕ್ಷ ರೂಪಾಯಿಗಳಿಗೆ ಸಂಬಂಧಪಟ್ಟಂತಹ ಕೇಸಸ್ ಏನು ಬರುತ್ತವೆ ಅವುಗಳನ್ನು ಅಲ್ಲೇ ತೀರ್ಮಾನ ಮಾಡುವುದಕ್ಕೆ ಆಗುತ್ತದೆ. ಜೊತೆಗೆ ಅದಕ್ಕೂ ಸಹ ಇಷ್ಟೇ ಮಾನ್ಯತೆ ಇರುವುದರಿಂದ ಇದಕ್ಕಿಂತ ಹೆಚ್ಚು ವ್ಯವಸ್ಥೆ ಆಗುತ್ತದೆ. ಎಲ್ಲವನ್ನೂ ಸಮಗ್ರವಾಗಿ 5 ಲಕ್ಷ, 10 ಲಕ್ಷ, 2 ಕೋಟಿ, ಮೂರು ಕೋಟಿ ರೂಪಾಯಿಗಳು ಆಗಿರುವಂತಹ ಪ್ರಕರಣಗಳನ್ನೂ ಕೂಡ ಒಂದೇ ಒಂದು ಡಿಸ್ಟ್ರಿಕ್ಟ್ ಕೋರ್ಟ್‌ಗೆ ಕೊಟ್ಟಿದ್ದೇ ಆದರೆ ಆ ಕೇಸ್‌ಗಳೆಲ್ಲವೂ ಮತ್ತೆ ಹೈಕೋರ್ಟಿಗೆ ಬಂದು ಮತ್ತೆ ಇದೇ ವ್ಯವಸ್ಥೆಗಳು ಆಗುತ್ತದೆ. ಈಗ ನ್ಯಾಯಾಲಯಕ್ಕೆ ನಾವೇನು ಕೊಟ್ಟಿದ್ದೇವೆ ಅದು ಅಷ್ಟೂ ಸಮಗ್ರವಾದ ರೀತಿಯಲ್ಲಿ ಉಪಯೋಗವಾಗುವುದಿಲ್ಲ ಎನ್ನುವ ದೃಷ್ಟಿಯಿಂದ ದಯಮಾಡಿ ಸೆಕ್ಷನ್ 49(ಸಿ) ಏನು ಇದೆ ಇದಕ್ಕೆ ಒಂದು ಮಾಡಿಫಿಕೇಷನ್ ಮಾಡಿ ಒಂದು ಸ್ಪೆಷಲ್ ಕೋರ್ಟ್‌ನ್ನು ಮಾಡುವಂಥಾದ್ದು ಅಥವಾ ಸ್ಪೆಷಲ್ ಟ್ರಿಬ್ಯುನಲ್‌ನನ್ನು ರಚನೆ ಮಾಡುವಂಥ ಅವಶ್ಯಕತೆ ಇದೆ. ದಯಮಾಡಿ ಅದಕ್ಕೆ ಒಂದು ಪ್ರಾಪೋಷನ್ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಎರಡನೆಯದು ಸೆಕ್ಷನ್ 49(ಡಿ) ಬಗ್ಗೆ ಹೇಳುವುದಾದರೆ ಇಲ್ಲಿ ಸ್ಪೆಷಲ್ ಕೋರ್ಟ್‌ನ್ನು ಮಾಡುವ ಬಗ್ಗೆ ನಾನು ಈಗಾಗಲೇ ಹೇಳಿದೆ. 5 ಲಕ್ಷ ರೂಪಾಯಿಗಳವರೆಗೂ ಇರುವಂತಹ ದಂಡಗಳಿಗೆ ಸ್ಪೆಷಲ್ ಟ್ರಿಬ್ಯುನಲ್ ಮಾಡುವಂಥಾದ್ದು, 5 ಲಕ್ಷ ರೂಪಾಯಿಗಳಿಗಿಂತ ಮೇಲ್ಪಟ್ಟಂತಹ ಯಾವುದೇ ಅವಾರ್ಡ್‌ಗಳು ಆಗಿರುವಂತಹ ಪ್ರಕಾರಗಳು ಬಂದರೆ ಅದಕ್ಕೆ ನಾವು ಸ್ಪೆಷಲ್ ಕೋರ್ಟ್‌ಗಳನ್ನು ರಚನೆ ಮಾಡುವ ಮುಖಾಂತರವಾಗಿ ಏನು ತಾವು ಈಗ ಸ್ಪೆಷಲ್ ಕೋರ್ಟ್‌ಗಳನ್ನು ಮಾಡಬೇಕೆಂದು ಇದ್ದೀರಿ ಈ ಕೋರ್ಟನ್ನು ಮಾಡುವ ಮುಖಾಂತರದಲ್ಲಿ ಅದಕ್ಕೆ ಹೆಚ್ಚಿನ ಒತ್ತು ಕೊಡಲಿಕ್ಕೆ ಅವಕಾಶ ಮಾಡಿಕೊಡಬಹುದು ಎಂದು ನನಗನ್ನಿಸುತ್ತದೆ. ಯಾವಾಗ ಈ ಸ್ಪೆಷಲ್ ಕೋರ್ಟ್‌ಗಳಲ್ಲಿ ಟೆಕ್ನಿಕಲ್ ಮೆಂಬರ್ ಮತ್ತು ಜ್ಯುಡಿಷಿಯಲ್ ಮೆಂಬರು ಹೀಗೆ 5 ಜನರನ್ನು ನೇಮಕ ಮಾಡಬಹುದು. ಆದರೆ ಇಲ್ಲಿ ಅದರ ಅವಶ್ಯಕತೆ ಇಲ್ಲ. ಇಲ್ಲಿ ಮೂರು ಜನ ಸದಸ್ಯರು ಇರುವಂತಹ ಒಂದು ವಿಶೇಷವಾದ ಹೈಕೋರ್ಟಿನ ನ್ಯಾಯಾಧೀಶರ ಸ್ಥಾನಮಾನ ಇರುವಂತಹ ಒಬ್ಬ ನ್ಯಾಯಾಧೀಶರನ್ನು ನೇಮಕ ಮಾಡಿದ್ದೇ ಆದರೆ ರಾಜ್ಯದ ಹೈಕೋರ್ಟ್‌ಗಳಿಗೆ ಹೋಗುವಂತಹ ಕೇಸಸ್ ಏನು ಬರುತ್ತದೆ ಅದನ್ನು ತಡೆಯುವುದಕ್ಕೆ ಅವಕಾಶವಾಗುತ್ತದೆ. ಏಕೆ ನಾನು ಈ ಮಾತನ್ನು ತಮ್ಮ ಮುಂದೆ ಹೇಳುತ್ತಿದ್ದೇನೆಂದರೆ ವಿಶೇಷವಾಗಿ ಟ್ರಿಬ್ಯುನಲ್ ಬೇಕು ಎಂದು ನಾನು ಕೇಳಿದೆ. ನಿಮ್ಮ ಒಂದು ವರದಿಯ ಪ್ರಕಾರ number of conginsable cases booked by the Vigilance Wing for the last 5 years ie 1995-2000: 1,862 cases and number of non-cognisable

cases booked-16,469 cases ಮಾತ್ರ. ಆದರೆ ಇದುವರೆಗೆ 16469 ಕೇಸನ್ ನಾನ್-ಕಾಗ್ನಿಸಬಲ್‌ನಲ್ಲಿ ಬುಕ್ ಮಾಡಿದ್ದೀರಿ. ಇದರ ಜೊತೆಯಲ್ಲಿ ಅವಾರ್ಡ್ ಆಗಿರುವುದು ಬ್ಯಾಕ್ ಬಿಲ್ಲಿಂಗ್ ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ 22 ಕೋಟಿ 18 ಲಕ್ಷ 90 ಸಾವಿರ ರೂಪಾಯಿಗಳನ್ನು ನೀವು ರೈಸ್ ಮಾಡುವದಕ್ಕೋಸ್ಕರವಾಗಿ ಕೊಟ್ಟಿದ್ದೀರಿ. ಆದರೆ ಈಗ ಇರುವಂತಹ ಪದ್ಧತಿಯಲ್ಲಿ ಈಗ ಇರುವಂತಹ ಕಾನೂನಿನ ಚೌಕಟ್ಟಿನ ಒಳಗೆ ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ ಹೋಗಬಾರದು ಎನ್ನುವುದು ನಿಮ್ಮ ಉದ್ದೇಶ. ಸ್ಪೀಡಿ ಟ್ರಯಲ್ ಆಗಬೇಕು ಎಂಬುದು ನಿಮ್ಮ ಉದ್ದೇಶ ನಾನು ಕಳೆದ ಭಾರಿ ಒಂದು ಪ್ರಶ್ನೆಯನ್ನು ಕೇಳಿದ್ದೆ ಲಾಯರ್‌ಗಳಿಗೆ ಕೊಟ್ಟಂತಹ ಫೀಜು ಎಷ್ಟು ಎಂದು. ನಾನು ಕಳೆದ ಬಾರಿ ಹೇಳಿದ್ದೆ ಒಂದು ಕೋಟಿ 25 ಲಕ್ಷ ರೂಪಾಯಿಗಳ ಫೀಜು ಕೊಟ್ಟಿತ್ತು. ಆದರೆ ರಿಕವರಿ ಆದ ಹಣ ಎಷ್ಟು? ಕೇವಲ 70 ಸಾವಿರ ರೂ. ಎಂಬ ಒಂದು ಅಂಕಿ ಅಂಶ ಕೊಟ್ಟಿದ್ದರು. ಆದರೆ ಈಗ ಸರ್ಕಾರ ಏನು ಮಾಡುತ್ತಿದೆ, ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ನಾನು ನಿನ್ನೆ ಸಹ ಹೇಳಿದ್ದೆ, ವಿಶೇಷವಾಗಿ ಕಳೆದ 6-7 ತಿಂಗಳಲ್ಲಿ ರಿಕವರಿಗೆ ಹೆಚ್ಚು ಒತ್ತು ಕೊಟ್ಟಿದ್ದೀರಿ. ಆದರೆ ಕಾನೂನಿನಲ್ಲಿ ತೊಂದರೆ ಇದೆ. How many cases are pending trial in the Courts? ಇನ್ನೂ 660 ಕೇಸನ್ ಇತ್ಯರ್ಥವಾಗದೇ ಪೆಂಡಿಂಗ್ ಇರುವಂತಹ ಕೇಸನ್ ಇದೆ. ಹೀಗಾಗಿ ಬರಬೇಕಾದ ಬಾಕಿ ಡಿಸೆಂಬರ್ 2000ದವರೆಗೆ ಸುಮಾರು 8.60 ಕೋಟಿ ಉಳಿದಿದೆ. ಇದುವರೆಗೂ ನಿಮಗೆ ರಿಕವರಿ ಆಗಿರುವುದು ಕೇವಲ 1.2 ಕೋಟಿ ರೂ.ಗಳು ಏತಕ್ಕೆ ಬೇಕು ಈ ವ್ಯವಸ್ಥೆಗಳು? ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಯಾರಾದರೂ ಏನಾದರೂ ಹೇಳಿದ ತಕ್ಷಣವೇ ಯಾರೋ ಆಡಳಿತ ಪಕ್ಷಕ್ಕೆ ಹೇಳುತ್ತಾರೆಂಬ ಭಾವನೆಯಿಂದ ತೆಗೆದುಕೊಳ್ಳಬೇಡಿ. ದೊಡ್ಡ ಕೈಗಾರಿಕೋದ್ಯಮಿಗಳು, ವ್ಯಕ್ತಿಗಳು ಅದರಲ್ಲಿ ಸೇರಿಕೊಂಡಿದ್ದ ಸಂದರ್ಭದಲ್ಲಿ ಕೇವಲ ಒಬ್ಬ ಸಣ್ಣ ಜಡ್ಜ್‌ಗೆ ಇಂಥ ದೊಡ್ಡ ಕೇಸ್‌ಗಳು ಬಂದಾಗ ಜಡ್ಜ್ ಮೇಲೆ ಅದರದೇ ಆದ ಪ್ರಭಾವಗಳು, ಸಮಸ್ಯೆಗಳು ಎಲ್ಲಿರುತ್ತವೆ. ಕೇವಲ 5 ಲಕ್ಷ ರೂ.ಗಳ ಒಳಗಿರುವ ಸಣ್ಣಪುಟ್ಟ ಪ್ರಕರಣಗಳನ್ನು ಇತ್ಯರ್ಥ ಮಾಡಲು ಆ ಟ್ರಬ್ಯೂನಲ್‌ಗೆ ಕೊಡಿ. ಆದರೆ ದೊಡ್ಡ ಕೇಸ್‌ಗಳು, ಕೋಟ್ಯಾಂತರ ಹಣ ಇರುವಂತಹ ಪ್ರಕರಣಗಳನ್ನು ವಿಶೇಷ ಕೋರ್ಟನ್ನು ರಚಿಸಲು ಅವಕಾಶ ಮಾಡಿಕೊಟ್ಟಲ್ಲಿ ಆದರೆ ಇದುವರೆಗೂ ಆಗಿರುವ ಈ ಸಮಸ್ಯೆಯನ್ನು ಪರಿಹಾರ ಮಾಡಬಹುದು. ದಯವಿಟ್ಟು ಈ ಅಂಶವನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು.

ಇಲ್ಲಿ ಎರಡನೆಯ ವಿಚಾರ ಹೇಳಿದ್ದೀರಿ ಸೆಕ್ಷನ್ 49(ಡಿ)ಯಲ್ಲಿ; ಸಬ್‌ಸೆಕ್ಷನ್(1), ಇದರಲ್ಲಿ ಬಹಳ ಒಳ್ಳೆಯ ಅಂಶಗಳನ್ನು ತಂದಿದ್ದೀರಿ. ಆದರೆ ಒಂದು ವಿಚಾರ ಹೇಳಿರುವುದರಲ್ಲಿ,

"Provided that if in the opinion of the Special Court, any complaint filed before it is prima-facie frivolous or vexatious, it shall reject the same without any further enquiry." ಎಂದಿದೆ. ಅಂದರೆ ಫರ್ದರ್ ಎನ್‌ಕ್ವೈರಿ ಮಾಡದೆ ಆ ನ್ಯಾಯಾಲಯದಲ್ಲಿ ಬಂದ ಅಂಶವನ್ನು ಕೈಬಿಡುವುದು ಬೇಡ. ಇದಕ್ಕೆ ಒಂದು ಅಂಶವನ್ನು ಸೇರಿಸಬಹುದು ಎಂದು ನನಗನ್ನಿಸುತ್ತದೆ. ಅಕೌಂಟಬಿಲಿಟಿಯನ್ನು ಎಲ್ಲಾ ಅಧಿಕಾರಿಗಳ ಮೇಲೆ ಕೊಡಬೇಕೆಂದು ಹೇಳಿದ್ದೀರಿ, ಪಬ್ಲಿಸಿಟಿಸ್ ಕಮಿಟಿಗೆ ಕೊಡಬೇಕೆಂದು ಹೇಳಿದ್ದೀರಿ. ಆದ್ದರಿಂದ ಕೈಬಿಡಬಹುದು ಎಂಬ ಅಂಶವನ್ನು ತೆಗೆದು.....

ಅಧ್ಯಕ್ಷರು: ಸಜೆಷನ್ ಕೊಡಿ.

ಶ್ರೀ ಎ.ರಾಮದಾಸ್: ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಂತಿಂಥ ಕೇಸ್ ಇಷ್ಟಿಷ್ಟು ಇರುವುದರಿಂದ ಪ್ರಭಾವಗಳಾಗಿ ಸಮಸ್ಯೆಗಳಾಗುತ್ತವೆ, ಮೊದಲು ಒಂದು ಟ್ರಯಲ್ ಕೋರ್ಟ್ ಮಾಡಬೇಕು, ಅನಂತರದಲ್ಲಿ ಒಂದು ವಿಶೇಷ ಕೋರ್ಟ್ ಮಾಡಿ ಎಂದು ಹೇಳುವ ಉದ್ದೇಶ ಈ ಕಾನೂನು ಕೂಡ ಕಾನೂನಾಗಿ ಉಳಿಯಬಾರದು. ಯಾವುದಾದರೂ ಕೇಸನ್ನು ಫಾಲ್ಸ್ ಎಂದು ಕೈ ಬಿಡುವುದೇ ಆದರೆ ಎಷ್ಟೊಂದು ಕೇಸ್‌ಗಳು ಫಾಲ್ಸ್ ಎಂದು ಆಗಿಬಿಡುತ್ತವೆ! ಹಾಗಾದರೆ ಯಾರು ಫಾಲ್ಸ್ ಕೇಸ್ ಹಾಕಿದ್ದಾರೆ ಎಂದು ನಿಮಗೆ ಅನ್ನಿಸುತ್ತೋ ಅಂಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಒಂದು ಅಂಶ ಸೇರಿಸಿ ಆದ್ದರಿಂದ ಸಂಪೂರ್ಣವಾಗಿ ಕೈಬಿಡುವ ಅಂಶವನ್ನು ನೀವು ಕೈಬಿಡಬೇಕು. ನಾನು ಏಕೆ ಈ ಅಂಶ ಹೇಳಿದೆ ಅಂದರೆ, ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ವಿಶೇಷವಾಗಿ ಪಬ್ಲಿಸಿಟಿಸ್ ಇಲಾಖೆಯಲ್ಲಿದ್ದ ಅಧಿಕಾರಿಗಳ ಮೇಲೆ ತಾವು ರೈಡ್ ಮಾಡಿದಾಗ ಸಿಕ್ಕಿರುವ ಅಕ್ರಮ ಆಸ್ತಿಗಳನ್ನು ನೋಡಿದರೆ, ಈಗ ತಾವು ತೆಗೆದುಕೊಂಡಿರುವ ಕ್ರಮವೇನಿದೆ ಇದೂ ಅದರೊಳಗೆ ಇನ್‌ಕ್ಲೂಡಾಗಬೇಕು. 9 ಜನ ಅಧಿಕಾರಿಗಳನ್ನು ತಾವು ಸಸ್ಪೆಂಡ್ ಮಾಡಿದ್ದೀರಿ. ಇವೆಲ್ಲಾ ಪ್ರೊಗ್ರೆಸಿವ್ ಸ್ಟೆಪ್ಸ್, ಆ ದೃಷ್ಟಿಯಿಂದ ಯಾವ ಅಧಿಕಾರಿಗಳು ಇದಕ್ಕೆ ಜವಾಬ್ದಾರರಾಗುವರು ಅವರನ್ನೂ ಕೂಡ ಸೇರಿಸುವಂತಹ ಕಲಸವನ್ನು ಇದರೊಳಗೆ ಸೇರಿಸಬೇಕೆಂದು ಹೇಳುತ್ತಾ, ಈ ಎರಡು ಮೂರು ಅಂಶಗಳನ್ನು ಬಿಟ್ಟರೆ ಬಾಕಿ ಅಂಶಗಳಲ್ಲಿ ಈಗಿರುವ ವ್ಯವಸ್ಥೆಯೊಳಗಡೆ ಬ್ಯಾಕ್ ಬಿಲ್ಲಿಂಗ್ ಅಡಿ ಕೋಟ್ಯಾಂತರ ರೂಪಾಯಿಗಳ ಬಾಕಿ ಬರಬೇಕಾದ್ದು ಉಳಿದಿದೆ. ಹಾಗೂ ಇದರಲ್ಲಿ ಕಾಗ್ನಿಸಬಲ್ ಮತ್ತು ನಾನ್‌ಕಾಗ್ನಿಸಬಲ್ ಕೇಸಸ್‌ನಲ್ಲಿ ಆಗಿರುವ ಎಷ್ಟೋ ಪ್ರಕರಣಗಳು ಇನ್ನೂ ಟ್ರಯಲ್ ಹಂತದಲ್ಲಿ ಉಳಿದಿರುವುದನ್ನು ಆದಷ್ಟು ತ್ವರಿತವಾಗಿ ನಿರ್ಧಾರ ಮಾಡುವುದಕ್ಕಾಗಿ ಏನು ಈ ಬಿಲ್ಲನ್ನು ತಂದಿದ್ದೀರಿ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಮೂರ್ನಾಲ್ಕು ಅಂಶಗಳನ್ನು ನೀವು ಸೇರಿಸದಿದ್ದರೆ

ಅಧಿಕಾರಿಗಳಿಗೂ ಜವಾಬ್ದಾರಿ ಫಿಕ್ಸ್ ಮಾಡಿದಂತಾಗುವುದಿಲ್ಲ, ಅಕೌಂಟಬಿಲಿಟಿ ಅವರಿಗೆ ಫಿಕ್ಸ್ ಮಾಡಿದಂತಾಗುವುದಿಲ್ಲ, ಜೊತೆಗೆ ಏಜೆಲೆನ್ಸ್ ಸ್ಕ್ವಾಡ್‌ಗೆ ಒಂದು ಬಲವನ್ನು ಕೊಟ್ಟಂತಾಗುವುದಿಲ್ಲ, ಅದರ ಮೇಲೊಂದು ಕಂಟ್ರೋಲ್ ಇರುವುದಿಲ್ಲ. ಆದ್ದರಿಂದ ಈ ಅಂಶಗಳನ್ನು ಅದರಲ್ಲಿ ಸೇರಿಸುವುದರಿಂದ ಇದಕ್ಕೆ ಹೆಚ್ಚು ಒತ್ತು ಸಿಗುತ್ತದೆ. ಎಂಬುದು ನನ್ನ ಮಾತಿನ ಪ್ರಮುಖ ಅಂಶಗಳು.

+ ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೇ, ನಿನ್ನೆ, ಇವತ್ತು ವಿದ್ಯುತ್ ಇಲಾಖೆಗೆ ಸೇರಿದ ಮೂರು ತಿದ್ದುಪಡಿಗಳನ್ನು ಸರ್ಕಾರ ಈ ಸದನದ ಒಪ್ಪಿಗೆಗಾಗಿ ಕಳುಹಿಸಿದೆ. ನಿನ್ನೆ ಎರಡರ ಬಗ್ಗೆ ನಾವ್ಯಾರೂ ವಾದ ಮಾಡಲು ಹೋಗಲಿಲ್ಲ. ಅವುಗಳಲ್ಲಿ ಮಹತ್ವ ಏನೂ ಇರಲಿಲ್ಲ. ವ್ಯತ್ಯಾಸವಿದ್ದುದು ಕನ್ನಡ ಇಂಗ್ಲೀಷ್‌ಗಳಲ್ಲಿ ತರ್ಜುಮೆ ಮಾಡಿದ್ದರಲ್ಲಿ ವ್ಯತ್ಯಾಸ ಇತ್ತೇ ಏನಃ ಬಾಕಿ ಏನೂ ಇರಲಿಲ್ಲ. ಮತ್ತೆ, ಇವತ್ತೇನು ಮಂಡನೆ ಮಾಡಿದ್ದಾರೆ ಇದರಲ್ಲೂ ಬಹಳ ವಿಶೇಷ ಇದೆಯೆಂದು ನನಗಾದರೂ ಅನ್ನಿಸುವುದಿಲ್ಲ. ಏನೂ ಇಲ್ಲ ಇದರಲ್ಲಿ ಕೋರ್ಟ್ ಮಾಡುತ್ತಾರೆ, ಶಿಕ್ಷೆಯನ್ನು 5 ತಿಂಗಳು ಮಿನಿಮಂ, ಮೂರು ವರ್ಷ ಇದ್ದುದ್ದನ್ನು 5 ವರ್ಷ ಮಾಡಿಕೊಳ್ಳುವುದಕ್ಕಾಗಿ ಇದು. ನಾನು ಏಕೆ ಮಾತನಾಡಲು ಎದ್ದು ನಿಂತೆ ಅಂದರೆ ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಡುವುದರಲ್ಲಿ ಶೂರರು ಹೇಳಿಕೆಗಳನ್ನು ಕೊಡುವುದರಲ್ಲೂ ಬಹಳ ಶೂರರು. ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಎಂದು ಹೇಳುತ್ತಾರಲ್ಲಾ.

ಅಧ್ಯಕ್ಷರು: ಪಾರ್ಲಿಮೆಂಟರಿ ಸಂಪ್ರದಾಯಕ್ಕೆ ತಕ್ಕಹಾಗೆ ಏನು ಏನು ಪದಗಳನ್ನು ಉಪಯೋಗಿಸಿಕೊಳ್ಳಬಹುದೋ ಅದನ್ನೆಲ್ಲಾ ಉಪಯೋಗಿಸಿಕೊಳ್ಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಅಸಂಸದೀಯ ಭಾಷೆ ಬಳಸಿದರೆ ಹೇಳಿ, ವಾಪಸ್ ಹೊರಟು ಹೋಗುತ್ತೇನೆ. ನಾನು ಹೇಳಿರುವ ವಿಚಾರಗಳಿಗಾಗಿ ಮಾನ್ಯ ಚಂದ್ರೇಗೌಡರು ನನ್ನ ಮೇಲಿನ ಸಿಟ್ಟಿಗಾಗಿ ಒಂದು ದಿವಸ ಎಕ್ಸ್‌ಪಂಜ್ ಮಾಡಿಸಿರುವುದನ್ನು ಬಿಟ್ಟರೆ ನನ್ನ ಈ 20 ವರ್ಷಗಳ ಶಾಸಕ ಜೀವನದಲ್ಲಿ ನಾನು ಹೇಳಿರುವುದನ್ನು ಯಾರೂ ಎಕ್ಸ್‌ಪಂಜ್ ಮಾಡಿಸಲು ಹೋಗಿಲ್ಲ. ತಾವೂ ಮಾಡುವುದಿಲ್ಲ, ನನಗೆ ಆ ವಿಶ್ವಾಸವಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಬಜೆಟ್ ಭಾಷಣದಲ್ಲಿ ವಿದ್ಯುತ್ ಕಳುಪಗೆ ಶಿಕ್ಷೆ ಕೊಡುವುದಾಗಿ ಏನು ಹೇಳಿದ್ದೀರಿ ಇದನ್ನೆಲ್ಲಾ ಮಾಡಿ. ಅದಕ್ಕೆ ನಾವೇನೂ ವಿರೋಧ ಮಾಡಲು ಹೋಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಎರಡು ಸಲಹೆಗಳನ್ನು ಮಾತ್ರ ಕೊಡುತ್ತೇನೆ. ಕೆಪಿಟಿಸಿಎಲ್‌ನ ಪರ್ಚೇಸ್‌ನಲ್ಲಿ ಸರ್ಕಾರ ಮಧ್ಯ ಪ್ರವೇಶಿಸಬಾರದು. ಇದು ನನ್ನ ಕಳಕಳಿಯ ವಿಚಾರ. ಅವರದನ್ನು ಅವರಿಗೇ ಬಿಟ್ಟುಬಿಡಿ. ಅದರ ಬಗ್ಗೆ ನೀವೇನೂ ಹೇಳುತ್ತಿಲ್ಲ. ಬರೀ

ವಿದ್ಯುತ್ ಕಳುವಿನ ಬಗ್ಗೆ ಹೇಳುತ್ತಿದ್ದೀರಿ, ಟ್ರಾನ್ಸ್‌ಫಾರ್ಮರ್‌ಗಳನ್ನು ಹೇಗೆ ಕೊಳ್ಳುತ್ತಾರೆ? ಒಂದು, ಕೆಪಿಟಿಸಿಎಲ್‌ಗೆ ಒಳ್ಳೆಯ ಅಧಿಕಾರಿಗಳನ್ನು ಕೊಟ್ಟಿದ್ದೀರೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರಿಗೆ ಟೋಟಲ್ ಫ್ರೀಹ್ಯಾಂಡ್ ಕೊಟ್ಟುಬಿಡಿ. ಆದಾಗಬೇಕು, ಇದಾಗಬೇಕೆಂದು ಮೊನ್ನೆ ನಾನು ಕೆಪಿಟಿಸಿಎಲ್ ಅಧ್ಯಕ್ಷರಿಗೆ ಒಂದು ಕಾಗದ ಬರೆದಿದ್ದೇನೆ. ಕೆಲವು ಫರ್ಮ್‌ಸ್‌ಗೆ ಪೋಲ್‌ಗಳನ್ನು ಸಪ್ಲೈ ಮಾಡುತ್ತಿದ್ದಾರೆ. ಆರ್ಡರ್ಸ್ ಪ್ಲೇಸ್ ಮಾಡುತ್ತಿದ್ದಾರೆ, ಆ ಫರ್ಮ್‌ಸ್ ಇಲ್ಲವೇ ಇಲ್ಲ. ಒಂದು ಫರ್ಮ್‌ದೆ, ನಾಲ್ಕೈದು ಹೆಸರುಗಳನ್ನು ಕೊಟ್ಟಿದ್ದೀರಿ, ಅಂಥವರಿಗೆ ಬೇಕಾದಷ್ಟು ಆರ್ಡರುಗಳನ್ನು ಕೊಡುತ್ತಿದ್ದಾರೆ. ಕ್ವಾಲಿಟಿ ಇಂಪ್ರೂವ್ ಆಗಬೇಕೆಂಬುದಿದ್ದರೆ ಅದೂ ಒಂದು ರೀತಿಯಲ್ಲಿ ಕಳ್ಳತನ ತಾನೇ? ಇನ್ನು ಮಾನ್ಯ ಹನುಮೇಗೌಡರು ಮಾತನಾಡಬೇಕಾಗಿತ್ತು, ಅವರು ಚೆನ್ನಾಗಿ ಮಾತನಾಡಿರೋರು! ಟ್ರಾನ್ಸ್‌ಫಾರ್ಮರ್‌ಗಳನ್ನು ಕೆಪಿಟಿಸಿಎಲ್ ಎಲ್ಲಿಂದ ಖರೀದಿಸುತ್ತದೆಂದು ನನಗರ್ಥವಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಮುಳಬಾಗಿಲಿನಲ್ಲೇನಾದರೂ ಸ್ಪೆಷಲ್ ಟ್ರಾನ್ಸ್‌ಫಾರ್ಮರ್ಸ್ ಕೊಡುವರೇನೋ ನನಗೆ ಗೊತ್ತಿಲ್ಲ, ನಮ್ಮ ಕನಕಪುರಕ್ಕೆ ಕೊಡುವ ಟ್ರಾನ್ಸ್‌ಫಾರ್ಮರ್‌ಗಳು ನಾಲ್ಕೈದು ದಿನಕ್ಕೆ ಕಟ್ಟು ಹೋಗುತ್ತವೆ. ಆದ್ದರಿಂದ ಸ್ವಲ್ಪ ಕ್ವಾಲಿಟಿ ಟ್ರಾನ್ಸ್‌ಫಾರ್ಮರ್‌ಗಳನ್ನು ತರಲಿಕ್ಕೆ ಸಾಧ್ಯವೇ? ಅದರಲ್ಲಿನ ಕಳ್ಳತನ ನಿಲ್ಲಿಸಿದರೆ ಒಳ್ಳೆಯದೆಂದು ನಾನು ತಿಳಿದಿದ್ದೇನೆ. ಪರ್ಚೇಸಿಂಗ್‌ನಲ್ಲಿ ಸರ್ಕಾರದವರು ಇಂಟರ್‌ಫಿಯರ್ ಆಗಲು ದಯವಿಟ್ಟು ಹೋಗಬೇಡಿ. ಪವರ್ ಎಂಬುದು ಭಾರೀ ದೊಡ್ಡ ಸಬ್ಜೆಕ್ಟ್. ನೀವು ಖಾಸಗೀಕರಣದಲ್ಲಿ ಏನೇನು ಮಾಡಿದ್ದೀರಿ ಮತ್ತೆ ಪಿಪಿಎನಲ್ಲಿ ಹಿಂದೆ ಏನು ಆಗಿದೆ, ಮುಂದೆ ಏನು ಆಗಿದೆ ಎಂಬ ಬಗ್ಗೆ ಇನ್ನೊಂದು ದಿನ ನಾನು ಮಾತನಾಡುತ್ತೇನೆ. ಸಿಂಧ್ಯಾರವರೆ, ಬಿಲ್ ಬಗ್ಗೆ ಮಾತನಾಡ ಬೇಡಿ ಎನ್ನುತ್ತೀರಿ. ಅದಕ್ಕೇ ನಾನು ಮಾತನಾಡಲು ಹೋಗುತ್ತಿಲ್ಲ. ಇವರಡು ಸಲಹೆಗಳ ಜೊತೆಗೆ ನಿಮ್ಮ ಏಜಿಲೆನ್ಸ್‌ಏಂಗ್ ಇದೆಯಲ್ಲಾ, ಕೆಪಿಟಿಸಿಎಲ್ ಅಧಿಕಾರಿಗಳೂ ಸದನದೊಳಗಿದ್ದಾರೆ, ಆ ಏಂಗ್‌ಗೆ ಇನ್ನೂ ಸ್ವಲ್ಪ ಟೈಟ್ ಮಾಡಬೇಕಾಗಿದೆ. ಅದೇನು ಅಂದರೆ ಎಕ್ಸಿಕ್ಯೂಟಿವ್ ಕೆಲಸ ಸಿಕ್ಕಲಿಲ್ಲವೆಂದ ತಕ್ಷಣವೇ ನನಗೆ ಕೆಪಿಟಿಸಿಎಲ್ ಏಜೆಲೆನ್ಸ್‌ಗೆ ಹಾಕಿ ಎಂದು ದೊಡ್ಡದೊಡ್ಡವರು ಬಂದುಬಿಡುತ್ತಾರೆ. ಅದ್ಯಾಕೆ ಅನ್ನುವುದು ನನಗಿನ್ನೂ ಅರ್ಥವಾಗಿಲ್ಲ. ಪೋಲೀಸ್‌ನಲ್ಲಿ ಕೂಡ ಸಾಮಾನ್ಯವಾಗಿ ಏನು ಮಾಡುತ್ತಾರೆ ಅಂದರೆ ಮುಂಚೆ ಬೆಂಗಳೂರು, ಅದಾಗಲಿಲ್ಲವೆಂದರೆ ಹುಬ್ಬಳ್ಳಿ, ಹುಬ್ಬಳ್ಳಿಯಲ್ಲೂ ಕಮರೀಪೇಟೆಗೆ ಭಾರೀ ಒತ್ತಡ. ಮಾನ್ಯ ಅಧ್ಯಕ್ಷರೇ, ನಿಮಗೆ ಇದರ ಅನುಭವ ಇರಲಿಕ್ಕೆ ಸಾಧ್ಯವಿಲ್ಲ, ಮಾನ್ಯ ಜಗದೀಶ ಶೆಟ್ಟರನ್ನು ಕೇಳಿ ಬೇಕಾದರೆ ಅದಾದಮೇಲೆ ರಾಷ್ಟ್ರೀಯ ಹೆದ್ದಾರಿ ಕೇಳುತ್ತಾರೆ, ಅಮೇಲೆ ರಾಜ್ಯ ಹೆದ್ದಾರಿಗಳಿಗೆ ಬರುತ್ತಾರೆ. ಇದು ಎಲ್ಲಾ ಕಾಲದಲ್ಲೂ ನಡೆದಿರುವುದು. ಮೊದಲು ಲೋಕಾಯುಕ್ತ ಕೇಳುತ್ತಿದ್ದರು, ಈಗ ಲೋಕಾಯುಕ್ತ ಕೇಳುವುದಿಲ್ಲ ಎಂದು ಅಂದುಕೊಂಡಿದ್ದೇನೆ. ಏಕೆ ಸ್ವಾಮಿ,

ಕೆಪಿಟಿಸಿಎಲ್ ಏಜೆಲೆನ್ಸ್ ಏಂಗನ್ಸ್ನೇ ಕೇಳುತ್ತಾರೆ? ಹಿಂದೆ ಯಾರೋ ಕೆಲವರೆಲ್ಲಾ ನನ್ನ ಮೇಲೆ ಬಹಳ ಒತ್ತಾಯ ಹಾಕುತ್ತಿದ್ದರು, ಆ ಏಜೆಲೆನ್ಸ್ನಲ್ಲಿ ಅವರೇ ಇರಬೇಕೆಂದು ಹೇಳಿ. ಅದ್ಯಾಕೆ ಎಂದು ನನಗೆ ಅರ್ಥವಾಗುತ್ತಿಲ್ಲ. ಅದನ್ನೇನಾದರೂ ರೀವ್ಯಾಂಪ್ ಮಾಡಿದ್ದೀರೋ? ಈ ಧರ್ಮಯುದ್ಧವನ್ನು ಮಾಡುವುದಕ್ಕೆ ಹೊರಟಿರುವವರು! ನಿನ್ನೆ ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಮೇಲೆ ಸಿಟ್ಟೇ ಮಾಡಿಕೊಂಡುಬಿಟ್ಟರು. ನಿಮಗೆ ಸ್ವಲ್ಪ ಗೀಳಿದೆ, ಈ ಹೊಸ ಕಾನೂನುಗಳನ್ನು ತೆಗೆದುಕೊಂಡು ಬರುವುದು ಎಂದು ಹೇಳಿದಾಗ ನಾನು ಹೇಳಿರತಕ್ಕ ಒಂದು ಅಂಶಕ್ಕೂ ಉತ್ತರ ಕೊಡತಕ್ಕ ಸೌಜನ್ಯವನ್ನು ಕನಿಷ್ಟಪಕ್ಷ ನಾನು ಐದು ಸಾರಿ ಗೆದ್ದು ಬಂದವನಿಗೆ ತೋರಿಸಲಿಲ್ಲ. ಆ ಇನ್ಕಂ ಸರ್ಟಿಫಿಕೇಟ್ ಗೋಲ್ಮಾಲ್ಗಳು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದರಲ್ಲಿ ಮಾತ್ರ ತಾವು ಎಡಪಿದಿರಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈಗ 'ಎ' ವರ್ಗ ಮತ್ತು 'ಬಿ' ವರ್ಗದ್ದು ಬೋಗಸ್ ಸರ್ಟಿಫಿಕೇಟುಗಳನ್ನು ಕೊಡುತ್ತಿಲ್ಲವೇ? ದಯವಿಟ್ಟು ತಾವು ಹೇಳಿ. 'ಎ' ವರ್ಗ ಮತ್ತು 'ಬಿ' ವರ್ಗದ ಬೋಗಸ್ ಸರ್ಟಿಫಿಕೇಟ್ಗಳನ್ನು ಕೊಡಲಿಲ್ಲವೆಂದರೆ ನಾನು ಅದನ್ನೆಲ್ಲಾ ವಾಪಸ್ ತೆಗೆದುಕೊಂಡು ಬಿಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ಸಚಿವರು):ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಗೀಳು ಎಂದು ಹೇಳಿದರು. ಅಷ್ಟಕ್ಕೇ ಅವರು ಹೇಳಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಎಷ್ಟೋ ಜನರು ಬೋಗಸ್ ಸರ್ಟಿಫಿಕೇಟ್ಗಳನ್ನು ತೆಗೆದುಕೊಂಡು ಚುನಾವಣೆಗೆ ನಿಲ್ಲುತ್ತಾರೆ. ಪುನಃ ಅದಕ್ಕೆ ಹೊಡೆದಾಟ, ಬೇಡ ಜಂಗಮ ಸರ್ಟಿಫಿಕೇಟು, ಆ ಸರ್ಟಿಫಿಕೇಟ್, ಈ ಸರ್ಟಿಫಿಕೇಟ್ ಎಂದೆಲ್ಲ ತೆಗೆದುಕೊಂಡು ಚುನಾವಣೆಯಲ್ಲಿ ನಿಂತಿರುವ ಉದಾಹರಣೆಗಳೇ ಇವೆ. ಅದನ್ನು how to prevent ಎನ್ನುವುದಕ್ಕೋಸ್ಕರ ಮಾಡಿದ್ದಕ್ಕೆ ತಾವು ಬೇರೆ ಬೇರೆ ವ್ಯಾಖ್ಯಾನವನ್ನು ಮಾಡಿದಿರಿ. ಅದು ಇರುವುದು ಬೋಗಸ್ ಸರ್ಟಿಫಿಕೇಟ್ ತೆಗೆದುಕೊಂಡಿರುವವರ ಬಗ್ಗೆ ಮಾತ್ರ ಸೀಮಿತವಾಗಿತ್ತು. ಅದಕ್ಕೆ ನೀವೇನೇನೊ ವ್ಯಾಖ್ಯಾನ ಮಾಡಿದಿರಿ. ನಾವು ಅದಕ್ಕೆ ಏಕೋ ಸ್ವಲ್ಪ ಥಾಟ ಬೇರೆ ಕಡೆ ನಡೆದಿದೆ, ಬಹುಶಃ ಬೇರೆ ದೃಷ್ಟಿಯಿಂದ ಅವರು ಚಿಂತನೆ ಮಾಡುತ್ತಿರಬಹುದು ಎಂದು ಹೇಳಿದರು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ನೋಡಿ ಈಗ ದಿನಾ ಮರ್ಡರ್ಗಳು ಆಗುವುದಕ್ಕೆ ಶುರುವಾಗಿ ಬಿಟ್ಟಿದೆ. ನಾವು ಈಗ ದಿನವೂ ಅದನ್ನು ಇಲ್ಲಿ ರೈಜ್ ಮಾಡುವುದಕ್ಕಾಗುತ್ತದೆಯೇ? ಇಲ್ಲಿ ರೈಜ್ ಮಾಡುವುದಕ್ಕೇ ನಮಗೆ ಬೇಜಾರಾಗಿ

ಬಿಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ದಿನಾ ಮರ್ಡರ್ ಆದರೆ ದಿನಾ ನೀವು ಹೇಳಲೇಬೇಕು. ತಮ್ಮ ಕಾಲದಲ್ಲಿ ಎಷ್ಟು ಆಗಿತ್ತು, ಈ ಕಾಲದಲ್ಲಿ ಎಷ್ಟು ಆಗಿತ್ತು ಎಂದು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈಗ 'ಎ' ಮತ್ತು 'ಬಿ' ವರ್ಗದ ಬಗ್ಗೆ ಎಷ್ಟೊಂದು ಅನ್ಯಾಯವಾಗಿದೆ? ಇನ್‌ಕಂ ಸರ್ಟಿಫಿಕೇಟ್ ಕೊಡುವುದಕ್ಕೆ ಎಷ್ಟೊಂದು ಹೆರಾಸ್‌ಮೆಂಟ್? ಇರಲಿ ಬಿಡಿ, ಅದನ್ನೆಲ್ಲಾ ಹೇಳಿದರೆ ವಿಷಯಾಂತರವಾಗುತ್ತದೆ. ಮತ್ತೆ ಮಾನ್ಯ ಅಧ್ಯಕ್ಷರು ಅದನ್ನು ಹೇಳುವುದಕ್ಕೆ ಬಿಡುವುದಿಲ್ಲ. ನಿಮ್ಮ ಸರ್ಕಾರಕ್ಕೂ ಅಷ್ಟೇ. ಹೊಸ ಕಾನೂನು ಮಾಡಿದ್ದೇವೆ, ಶಿಕ್ಷೆ ಕೊಡುತ್ತೇವೆ. ಸ್ವಾಮಿ, ಶಿಕ್ಷೆ ಕೊಡತಕ್ಕ ಇಚ್ಛಾಶಕ್ತಿ ನಿಮಗಿದೆಯಾ? ನಿಮ್ಮ ಕೈಯಲ್ಲಿ ಅದು ಆಗುವುದಿಲ್ಲ. ಸುಮ್ಮನೆ ಹೇಳುತ್ತೀರಿ ಅಷ್ಟೆ. ವಿಜಿಲೆನ್ಸ್ ವಿಂಗ್ ಇದೆ, ಅದನ್ನು ಟೈಟನ್ ಮಾಡಿ. ಮಾನ್ಯ ರಾಮದಾಸ್‌ರವರು ಆಗಲೇ ಮಾತನಾಡುತ್ತಾ ಕೆಲವು ಅಂಕಿಅಂಶಗಳನ್ನು ಕೊಟ್ಟರು. ಏನು ನೀವು ಮಾಡಿರತಕ್ಕದ್ದು? ಸುಮ್ಮನೆ ಇದನ್ನೆಲ್ಲಾ ಏನೆಂದರೆ, ಜನಗಳಿಗೆ ನಾವೇನೋ ಮಾಡಿದ್ದೇವೆ ಎಂದು ಹೇಳಿ ತೋರಿಸಿಕೊಳ್ಳುವುದಷ್ಟೆ. ಇಷ್ಟು ಹೇಳಿ, ನಾನು ಈ ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವುದೇನೆಂದರೆ ನೀವೇನು ಹೇಳುತ್ತೀರಾ, ಅದನ್ನು ಮಾಡಿತೋರಿಸಿ. ಸುಮ್ಮನೆ ಹೇಳುವುದಕ್ಕೆ ಹೋಗಬೇಡಿ. ಅದನ್ನು ಮಾಡಿ ಎಂದು ಹೇಳಿ ಒತ್ತಾಯ ಮಾಡುತ್ತೇನೆ. ಇದಕ್ಕೇನು ನಾವು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ ಸ್ವಾಮಿ.

+ ಶ್ರೀ ಯು.ಆರ್.ಸಭಾಪತಿ(ಉಡುಪಿ): ಮಾನ್ಯ ಅಧ್ಯಕ್ಷರೇ, ಇದೊಂದು ಬಹಳ ಪ್ರಮುಖವಾದ ತಿದ್ದುಪಡಿ ಎಂದು ಹೇಳಿ ನಾನು ಎಣಿಸಿಕೊಂಡಿದ್ದೇನೆ. ಮಾನ್ಯ ಸಿಂಧ್ಯಾರವರಾಗಲಿ, ಮಾನ್ಯ ರಾಮದಾಸ್‌ರವರಾಗಲಿ ಹೇಳಿದಂಥ ಏನು ವಿಚಾರಧಾರೆ ಇದೆ, ಅದಕ್ಕೆ ಪೂರಕವಾಗಿ ಒಂದು ಹದರಿಕೆಯನ್ನು ಜನರಲ್ಲಿ ತರಿಸಬೇಕೆಂದು ಹೇಳಿ ಈ ಕಾನೂನನ್ನು ನಾವು ತರುತ್ತಿರುವುದು ಎಂದು ಹೇಳಿ ನಾನು ಭಾವಿಸಿದ್ದೆ. ಏಕೆಂದರೆ ಪ್ರತಿ ರಾಜ್ಯಗಳು 20 ಪರ್‌ಸೆಂಟ್ ಮಾತ್ರ ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಎಂದು ತೋರಿಸುತ್ತಿದ್ದ ಕಾಲ. ಈಗ ವಸ್ತುಸ್ಥಿತಿಯನ್ನು ಇತ್ತೀಚಿನ ದಿನಗಳಲ್ಲಿ ಪ್ರತಿ ರಾಜ್ಯಗಳೂ ಹೇಳುವುದಕ್ಕೆ ಶುರು ಮಾಡಿವೆ. ದೆಹಲಿಯಲ್ಲಿ ಶೇ.50, ಒರಿಸ್ಸಾದಲ್ಲಿ ಶೇ.40, ಮಹಾರಾಷ್ಟ್ರದಲ್ಲಿ ಶೇ. 30-36 ಇದೆ. ನಮ್ಮಲ್ಲೂ 36 ಪರ್‌ಸೆಂಟ್ ಇದೆ ಎಂದು ಹೇಳುವಂಥಾದ್ದು ಇದೆ. ಒಟ್ಟಿನಲ್ಲಿ ಟೋಟಲ್ ಗ್ಯಾಸ್ ಲಾಸ್ ನಮಗೆ 400 ಕೋಟಿ ರೂಪಾಯಿಗಳಷ್ಟು ಈ ಕಳ್ಳತನದಿಂದಲೇ ಹೋಗುತ್ತಿದೆ ಎನ್ನುವುದನ್ನು ನಾನು ಈ ಸದನಕ್ಕೆ ತಿಳಿಸಬಯಸುತ್ತಿದ್ದೇನೆ. ನಮ್ಮ ವಿದ್ಯುತ್ ಬಳಕೆದಾರರು ಇದೊಂದು ಗಂಭೀರ ಪ್ರಕರಣವಲ್ಲವೆಂದೇ ಭಾವಿಸಿದ್ದಾರೆ. ಮೊದಲು ಕಾನೂನಿನಲ್ಲಿ ಏನಿತ್ತು?

ದಂಡ ಅಥವಾ ಶಿಕ್ಷೆ ಎಂದು ಇತ್ತು, ಈಗ ಹಾಗಲ್ಲ. ಜೈಲು ಶಿಕ್ಷೆ, 5 ಸಾವಿರ ರೂಪಾಯಿಗಳ ದಂಡ ಮತ್ತು ಶಿಕ್ಷೆ, ಕನಿಷ್ಟ ಮೂರು ತಿಂಗಳು. ಈ ಒಂದು ಹೆದರಿಕೆ ಜನರಲ್ಲಿ ಉದ್ಭವವಾದರೆ ಮಾತ್ರ ಆಗ ಇಲ್ಲಿ ಸ್ವಲ್ಪ ರೆಸ್ಟ್ರಿಕ್ಷನ್ನನ್ನು ತರಲಿಕ್ಕಾಗುತ್ತದೆ. ಮಾನ್ಯ ಸಿಂಧ್ಯಾರವರು ಏಜಿಲೆನ್ಸ್ ಮತ್ತು ಪುಲಿಕೇಶಿ ಪಡೆ ಇದ್ದರೂ ಏನೂ ಪ್ರಯೋಜನವಾಗಲಿಲ್ಲವೆಂದು ಹೇಳಿದರು. ನಾನು ಹೇಳುತ್ತಿದ್ದೇನೆ, ಏಜಿಲೆನ್ಸ್, ಪುಲಿಕೇಶಿ ಪಡೆ ಮತ್ತು ರೆವಿನ್ಯೂ ಮಾನಿಟರಿಂಗ್ ವಿಂಗ್ ಏನೆಲ್ಲಾ ಇದೆ, ಇದರಿಂದಾಗಿ ನಮ್ಮ ಸರ್ಕಾರ ಬಂದ ಮೇಲೆ ಸುಮಾರು 60 ಕೋಟಿ ರೂಪಾಯಿಗಳ ಬಾಕಿ ಇದ್ದದ್ದನ್ನು ನಾವು ನೋಟೀಸನ್ನು ಕಳುಹಿಸಿ ಅದರಲ್ಲಿ 24 ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ. ನಾನು ಹೇಳುವ ಪ್ರಕಾರ ಇದೊಂದು ಮಹತ್ವಪೂರ್ಣವಾದ ಮಸೂದೆಯಾಗಿದ್ದು ಬಹುಶಃ ಇಡೀ ರಾಜ್ಯದಲ್ಲಿ ಕೆಪಿಟಿಸಿಎಲ್ ಜನಸಾಮಾನ್ಯರಿಗೆ ಒಂದು ಹಿತವನ್ನು ತರುವ ಉದ್ದೇಶದಿಂದ ತಂದಿರುವುದಿದೆ. ಈಗಾಗಲೇ ವಿರೋಧ ಪಕ್ಷಗಳವರು ಹೇಳುತ್ತಿದ್ದರು. ಈಗಾಗಲೇ ಇಂಡಸ್ಟ್ರಿಯಾಲಿಸ್ಟ್‌ಗಳೆಲ್ಲಾ ಅಷ್ಟು ಕದಿಯುತ್ತಾರೆ, ಇಷ್ಟು ಕದಿಯುತ್ತಾರೆ, ಅವರಿಗೆ ದಂಡನೆ ವಿಧಿಸುವುದಕ್ಕೆ ಆಗುತ್ತಿಲ್ಲ, ನಿಮಗೆ ದಂಡನೆ ಕೊಡಲಿಕ್ಕೆ ಇಚ್ಚಾಶಕ್ತಿ ಇದೆಯೇ ಎಂದು ಸಿಂಧ್ಯಾ ಸಾಹೇಬರು ಕೇಳಿದರು. ದಂಡನೆ ಕೊಡುವ ಇಚ್ಚಾಶಕ್ತಿ ಇದ್ದುದರಿಂದಲೇ ನಾವು ಈ ಕಾನೂನನ್ನು ತಂದದ್ದು. ಇಲ್ಲದಿದ್ದರೆ ನಾವು ಈ ಕಾನೂನನ್ನು ತರುತ್ತಿರಲಿಲ್ಲ. ಇದನ್ನು ಮತ್ತಷ್ಟು ಪರಿಣಾಮಕಾರಿಯಾಗಿ ತರಬೇಕೆನ್ನುವುದೇ ಈ ತಿದ್ದುಪಡಿಯಲ್ಲಿರತಕ್ಕ ಒಂದು ವಿಚಾರ. ಈ ತಿದ್ದುಪಡಿಯಲ್ಲಿ ಅಪರಾಧಿಗಳು ಮಾಡಿದ ತಪ್ಪನ್ನು ಒಪ್ಪಿಕೊಂಡಲ್ಲಿ ದಂಡ ವಿಧಿಸಿ ಪ್ರಕರಣ ಮುಕ್ತಾಯಗೊಳಿಸುವ ಅವಕಾಶವನ್ನು ಕೊಡಲಾಗಿದೆ. ಒಂದು ವೇಳೆ ಅನಿರೀಕ್ಷಿತವಾಗಿ ಒಮ್ಮೆ ತಪ್ಪು ಮಾಡಿದ್ದರೆ ಅದಕ್ಕೂ ಒಂದು ಅವಕಾಶವನ್ನು ಕೊಟ್ಟಿದ್ದೇವೆ. ಅಕ್ರಮ ಸಣ್ಣಪುಟ್ಟ ಪಂಪ್‌ಸೆಟ್ ಇಂಥಾದ್ದರಲ್ಲಿ ವಿದ್ಯುತ್ ಜೋಡಣೆ ಮಾಡಿದ್ದರಿಂದಾಗಿ ಅವರೇನೊ ತಪ್ಪು ಮಾಡಿದ್ದಾರೆಂದು ಹೇಳಿ ಅವರಿಗೆ ಒಂದು ಸಲಕ್ಕೆ ಅವಕಾಶ ಇದೆ. ಅವರಿಗೆ ದಂಡನೆಯಲ್ಲಿ ರಿಯಾಯಿತಿ ಕೊಡತಕ್ಕ ಅವಕಾಶ ಇದೆ. ಇದರಲ್ಲಿ ಭಾಗ್ಯಜ್ಯೋತಿಯಲ್ಲಿ ಅಥವಾ ಅಕ್ರಮ ಪಂಪ್‌ಸೆಟ್ ಹೊಂದಿದಲ್ಲಿ, ವಿದ್ಯುತ್ ಉಪಕರಣ ಹೊಂದಿರುವ ಬಡವರಿಗೆ, ಸಾಮಾನ್ಯ ಜನರಿಗೆ ಅದನ್ನು ಸಕ್ರಮಗೊಳಿಸುವುದಕ್ಕೂ ಒಂದು ಅವಕಾಶ ಸಿಗುತ್ತದೆನ್ನುವುದನ್ನು ನಾನು ಈ ಮಸೂದೆಯ ಪರವಾಗಿ ಹೇಳಿ ಇವತ್ತೇನು ವಿಶೇಷ ನ್ಯಾಯಾಲಯವನ್ನು ರಚನೆ ಮಾಡುವ ಬಗ್ಗೆ ಅವಕಾಶವನ್ನು ಕಲ್ಪಿಸಿದ್ದೀರಿ.

. ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ಈ ಬಿಲ್ ಬಗ್ಗೆ ಭಾರಿ ಒಳ್ಳೆಯದು ಎಂದು ಹೇಳಿ ಹೊಗಳುಭಟ್ಟರ ಕೆಲಸವನ್ನು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಸನ್ಮಾನ್ಯ ಅಧ್ಯಕ್ಷರೇ, ಇದು ನನ್ನ ಅಭಿಪ್ರಾಯ. ನನ್ನ ಅಭಿಪ್ರಾಯವನ್ನು ಪ್ರಶ್ನೆ ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ.

(ಗೊಂದಲ)

ಶ್ರೀ ಯು.ಆರ್.ಸಭಾಪತಿ: ಹೌದು. ಇದು ಇಚ್ಛಾಶಕ್ತಿಯ ಸರ್ಕಾರ. ಅದಕ್ಕೋಸ್ಕರವಾಗಿಯೇ ಈ ಕಾನೂನನ್ನು ತರುತ್ತಿರುವುದು. ಆಡಳಿತ ಪಕ್ಷದ ಪರವಾಗಿ ನಾನು ಈ ಅಧಿವೇಶನದಲ್ಲಿ ಮಾತನಾಡಿಲ್ಲ. ಈಗ ಒಂದು ಸಲ ಎದ್ದು ನಿಂತರೆ ಹೊಗಳು ಭಟ್ಟನಾಗಿ ಮಾತನಾಡಿದೆ ಎಂದು ವಿರೋಧಪಕ್ಷದವರು ಹೇಳುತ್ತಿದ್ದಾರೆ. ವಿರೋಧಪಕ್ಷದವರು ಏನೂ ಇಲ್ಲದ ರಚನಾತ್ಮಕವಾದ ಟೀಕೆಗಳನ್ನು ಮಾಡುತ್ತಿದ್ದಾರೆ. ಅವರು ಇಷ್ಟರವರೆಗೆ ನಿರ್ಜೀವ ಆಗಿದ್ದವರು. ಇವರು ಎಷ್ಟು ಅಧ್ಯಯನ ಮಾಡುತ್ತಾರೆ, ಏನು ಮಾಡುತ್ತಾರೆ. ಎಂದು ಗೊತ್ತಾಗುತ್ತದೆ. ನಾನು ಏನಾದರೂ ಒಂದು ಎತ್ತಿ ಪ್ರಸ್ತಾಪಿಸಿದರೆ ಕಡೆಗೆ ಅದು ಸಬ್‌ಜ್ಯುಡೀಸ್ ಆಗುತ್ತದೆ ಎಂದು ಹೇಳಿಬಿಡುತ್ತಾರೆ. ನಾನು ಈ ಮಸೂದೆಯನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಪಿ.ಮುದ್ದಹನುಮೇಗೌಡ(ಕುಣಿಗಲ್): ಮಾನ್ಯ ಅಧ್ಯಕ್ಷರೇ, ಈ ಮಸೂದೆ ಬಗ್ಗೆ ಚರ್ಚೆ ಮಾಡುವುದೇ ತಪ್ಪು ಎನ್ನುವ ತರಹ ಮಾನ್ಯ ಸದಾನಂದಗೌಡರು ಹೇಳಿದರು, ನನ್ನ ಮನಸ್ಸಿಗೆ ಬಹಳ ನೋವಾಯಿತು. ಇದರಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿಕ್ಕೆ ನಮಗೆ ಮುಕ್ತವಾದಂಥ ಅವಕಾಶ ಇರಬೇಕು. ನಾವು ಅದನ್ನು ಒಪ್ಪಿಕೊಳ್ಳುತ್ತೇವೋ, ವಿರೋಧ ಮಾಡುತ್ತೇವೋ ಅಥವಾ ಏನಾದರೂ ಅದಕ್ಕೆ ತಿದ್ದುಪಡಿಯನ್ನು ಸಲಹೆ ಮಾಡುತ್ತೇವೋ ಅದು ಬೇರೆ ವಿಚಾರ. ಆದರೆ ಈ ಮಸೂದೆ ಬಗ್ಗೆ ಚರ್ಚೆ ಮಾಡುವುದೇ ಸರಿಯಲ್ಲ, ನೀವು ಆಡಳಿತ ಪಕ್ಷದ ಸದಸ್ಯರುಗಳು, ನೀವ್ಯಾಕೆ ಮಾತನಾಡುತ್ತೀರಿ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಕ್ಕೆ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಾ, ಇದು ಒಂದು ಒಳ್ಳೆಯ ಸ್ವಾಗತಾರ್ಹವಾದಂಥ ಮಸೂದೆ. ಹಾಗು ಬಹಳ ಒಳ್ಳೆಯದು ಇದೆ. ಏನಾಗಿದೆ ಅಂದರೆ, ಆರು ತಿಂಗಳೊಳಗೆ ಒಂದು ಕೇಸನ್ನು ಡಿಸ್‌ಪೋಸ್ ಮಾಡತಕ್ಕ ವ್ಯವಸ್ಥೆ ಏನಿದೆ, ಅದರಿಂದ ನಿಜವಾಗಲೂ ಕೂಡ ಬಹಳ ಅನುಕೂಲವಾಗುತ್ತದೆ. ಇಲ್ಲಿ ನಾವು ವಿದ್ಯುಚ್ಛಕ್ತಿಯ ಕಳ್ಳತನ ಎಂದ ತಕ್ಷಣ ಬಹುಶಃ ನಾವು ಅನೇಕರು ಈ ಮಹಾನಗರಗಳಲ್ಲಿ ಮತ್ತೆ ಪಟ್ಟಣ ಪ್ರದೇಶಗಳಲ್ಲಿ ಆಗತಕ್ಕಂಥ ಕಳವಿನ ಬಗ್ಗೆ ನಮಗೆ ಅಷ್ಟೊಂದು ಜ್ಞಾನ ಇರುವುದಿಲ್ಲ. ಆದರೆ ಇವತ್ತು ಬಹಳ ಅತಿ ಹೆಚ್ಚಾಗಿ ಮಹಾನಗರಗಳಲ್ಲಿ ಮತ್ತೆ ಪಟ್ಟಣ ಪ್ರದೇಶಗಳಲ್ಲಿ ಅತಿ ಹೆಚ್ಚಿನದಾಗಿ ವಿದ್ಯುತ್ ಕಳವು ಆಗುತ್ತಿದೆ. ಆದ್ದರಿಂದ ಈ ಒಂದು ವಿದ್ಯುಚ್ಛಕ್ತಿ ಕಳವು

ಅದರ ತೀವ್ರತೆಯನ್ನು, ಗಂಭೀರತೆಯನ್ನು ಹೆಚ್ಚು ಪಡಿಸಲಿಕ್ಕೆ ನಿಜವಾಗಲೂ ಕೂಡ ಇದು ಸ್ವಾಗತಾರ್ಹವಾದ ತಿದ್ದುಪಡಿ ಎಂದು ಹೇಳಿ ಒಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸೆಕ್ಷನ್ 49(ಬಿ) ಎನ್ನುವ ಸೆಕ್ಷನ್ ಹೊಸದಾಗಿ ಸೇರ್ಪಡೆಯಾಗುತ್ತಿದೆ. ದಯಮಾಡಿ ಮಾನ್ಯ ಕಾನೂನು ಸಚಿವರು ಇದರ ಬಗ್ಗೆ ಗಮನವನ್ನು ಹರಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ. ನಾವು ಈಗ ಸ್ಪೆಷಲ್ ಕೋರ್ಟ್‌ಗೆ ಪ್ರಾಸಿಕ್ಯೂಷನ್ ಮಾಡಿಕೊಂಡಿದ್ದೇವೆ. ಯಾವುದೇ ಒಂದು ವಿದ್ಯುಚ್ಚಕ್ತಿಯ ಕಳವಿನ ಪ್ರಕರಣವನ್ನು ನಾವು ಈ ವಿಶೇಷ ನ್ಯಾಯಾಲಯದಲ್ಲಿ ತೀರ್ಮಾನ ಮಾಡತಕ್ಕ ವ್ಯವಸ್ಥೆಯನ್ನು ಮತ್ತೆ ಅದಕ್ಕೆ ಕೆಲವು ಪ್ರೊಸೀಜರನ್ನೂ ಕೂಡ ಬಹಳ ಚೆನ್ನಾಗಿ ಇದರಲ್ಲಿ ವ್ಯಕ್ತಪಡಿಸಿದೆ. ಈಗ ಸ್ಪೆಷಲ್ ಕೋರ್ಟ್ ಇರುವ ಸಂದರ್ಭದಲ್ಲಿ ಯಾವುದೇ ಒಂದು ಅಧಿಕಾರಿಗೆ ಕಾಂಪೌಂಡ್ ಮಾಡಿಕೊಳ್ಳುವುದಕ್ಕೆ ಪವರ್ಸ್ ಕೊಡತಕ್ಕದ್ದು ಏಕೆ? ಅದನ್ನು ದಯಮಾಡಿ ಆಲೋಚನೆ ಮಾಡಬೇಕು. • ಏಕೆಂದರೆ ಈಗ ಸ್ಪೆಷಲ್ ಕೋರ್ಟ್ ಇದೆ. ಸ್ಪೆಷಲ್ ಕೋರ್ಟಗೆ ನಾವು ಜ್ಯೂರಿಸ್‌ಡಿಕ್ಷನನ್ನು ಫಿಕ್ಸ್ ಮಾಡಿದ್ದೇವೆ. ಅಲ್ಲಿಗೆ a Judge of the rank of the Sessions Judge, will be appointed as a special Judge. ಇಂಥ ಒಂದು ಸಂದರ್ಭದಲ್ಲಿ ವಿದ್ಯುತ್ ಮಂಡಳಿಯ ಒಬ್ಬ ಅಧಿಕಾರಿಗೆ ಸೆಕ್ಷನ್ 49(ಬಿ)ಯಲ್ಲಿ ಆತನಿಗೆ ಅಧಿಕಾರವನ್ನು ಕೊಟ್ಟು ನೀನು ಕಾಂಪೌಂಡ್ ಮಾಡಿಕೋ ಎಂದು ಹೇಳುವುದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಈಗೇನಾಗಿದೆ, ಸೆಕ್ಷನ್ 49(ಬಿ) ಕಾಂಪೌಂಡಿಂಗ್ ಆಫ್ ಅಫೆನ್ಸಸ್‌ನಲ್ಲಿ

"…. any officer of an electricity utility specially empowered in this behalf by the State Government may accept from any consumer or person who committed or who is reasonably suspected of having committed an offence of theft of energy punishable under this Act, a sum of money by way of compounding for the offence as the State Government may by, notification specify from time to time." ಎಂದಿದೆ. ಅದರಿಂದ ನಾವು ಈ ಒಂದು ವಿಶೇಷ ನ್ಯಾಯಾಲಯವನ್ನು ರಚನೆ ಮಾಡಿದಂಥ ಸಂದರ್ಭದಲ್ಲಿ ಈ ತರಹ ಒಂದು ಅಧಿಕಾರಿಗೆ ಪುನಃ ಕಾಂಪೌಂಡ್ ಮಾಡಿಕೊಳ್ಳುವುದಕ್ಕೆ ಪವರನ್ನು ಕೊಡತಕ್ಕದ್ದು ಬಹುಶಃ ಅದೊಂದು ಕಾನ್‌ಫ್ಲಿಕ್ಟ್ ಆಗುತ್ತದೆ ಎಂದು ಹೇಳಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

ಏಕೆಂದರೆ, ಫರ್ದರ್ ಇದರಲ್ಲಿ ಏನು ಹೇಳುತ್ತದೆ ಎಂದರೆ ಅವನು ಒಂದು ಪಕ್ಷ ಅಪರಾಧ ಮಾಡಿರತಕ್ಕಂತಹ ವ್ಯಕ್ತಿ ಜೊತೆಯಲ್ಲಿ ಇವರು ಕಾಂಪೌಂಡ್ ಮಾಡಿಕೊಳ್ಳತಕ್ಕವನು ಜೈಲಿನಲ್ಲಿ ಇದ್ದರೆ ಅವನನ್ನು ಬಿಡುಗಡೆ ಮಾಡಬೇಕು ಮತ್ತು ಅವನ ಮೇಲೆ ಇರತಕ್ಕ ಕೇಸನ್ನೂ ವಜಾ ಮಾಡಬೇಕು. ಅವನು ಕಾಂಪೌಂಡ್ ಮಾಡಿಕೊಂಡಿದ್ದಾನೆ ಎಂದು ತೀರ್ಮಾನ ಮಾಡಿಕೊಂಡರೇನೋ ಎನ್ನುವಷ್ಟು ಪವರ್ಸ್ 49(ಬಿ) ಸೆಕ್ಷನ್‌ನಲ್ಲಿ ಇದೆ. The powers are vested with an officer of the Board. I think that leads to a sort of conflict between the officer and the Court. So, the same powers can be vested with the Special Court. ಅದರ ಬಗ್ಗೆ ದಯಮಾಡಿ ಸ್ವಲ್ಪ ಆಲೋಚನೆ ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಇದೊಂದು ಸ್ಮಾಲ್ ಅಮೆಂಡ್‌ಮೆಂಟ್.

ಶ್ರೀ ಸಿ.ಭೈರೇಗೌಡ: ನಮ್ಮ ಕಡೆಯೂ ಸ್ವಲ್ಪ ನೋಡಿ. ನಾನೂ ಒಂದೆರಡು ವಿಚಾರ ಹೇಳಬೇಕು.

ಅಧ್ಯಕ್ಷರು: ಶಿಕ್ಷೆ ಕೊಡುವುದು ಬೇಡ ಎಂದು ಹೇಳುತ್ತೀರಾ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಯಾರಿಗೋ ಸುಮ್ಮನೆ ಶಿಕ್ಷೆ ಕೊಡಬೇಡಿ, ಕೊಡುವವರಿಗೆ ಕೊಡಿ ಎಂದು ಹೇಳುತ್ತಾರೆ.

ಶ್ರೀ ಡಿ.ಬಿ.ಚಂದ್ರೇಗೌಡ: ಎಲ್ಲಾ ವಿಚಾರದಲ್ಲೂ ನೀವು ಮಾತನಾಡಲೇಬೇಕು ಎಂದರೆ ಹೇಗೆ?

ಶ್ರೀ ಸಿ.ಭೈರೇಗೌಡ: ನಾನು ಈ ಅಧಿವೇಶನದಲ್ಲಿ ಮಾತಾಡುವುದಕ್ಕೆ ಹೋಗಲಿಲ್ಲ.

ಶ್ರೀ ಯು.ಆರ್.ಸಭಾಪತಿ: ನಾವು ಮಾತನಾಡಿದರೆ ಹೊಗಳು ಭಟ್ಟರು ಎಂದು ಹೇಳಿದರು. ಆದರೆ ಇವರು ಮತ್ತೆ ಚರ್ವಿತ ಚರ್ವಣ ಮಾಡಲಿಕ್ಕೆ ಹೊರಟಿದ್ದಾರೆ.

ಅಧ್ಯಕ್ಷರು: ಅವರೇನೋ ಕೋಲಾರ ಸ್ಪೆಷಲ್ ಎಂದು ಹೇಳುತ್ತಿದ್ದಾರೆ. ನನ್ನ ಮೇಲೆ ಏಕೆ ಆಪಾದನೆ? ತಾವು ಕುಳಿತುಕೊಳ್ಳಿ.

ಶ್ರೀ ಡಿ.ಪಿ.ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ನನಗೆ ಅನ್ನಿಸುತ್ತಿದೆ, ಈ ಕೋಲಾರದವರಿಗಾಗಿ ಒಂದು ವಿಶೇಷ ಅಧಿವೇಶನ ತಾವು ಮಾಡಬಹುದು.

ಅಧ್ಯಕ್ಷರು: ಅಂತಹದ್ದು ಏನೂ ಇಲ್ಲ. ಅವರು ಒಳ್ಳೆಯ ಸಲಹೆಗಳನ್ನು ಕೊಡುತ್ತಾರೆ.

ಆದರೆ ಎರಡು ನಿಮಿಷದಲ್ಲಿ ಅವರು ಮುಗಿಸುವುದಿಲ್ಲ, ಅದೇ ತಾನೇ ಪ್ರಶ್ನೆ ಇಲ್ಲಿ ಬಂದಿರುವುದು.

ಶ್ರೀ ಎಸ್.ಸುರೇಶ್ ಕುಮಾರ್: ನಾನು ಒಂದು ತಪ್ಪು ಮಾಡಿದೆ ಎಲೆಕ್ಷನ್‌ಗೆ ನಿಲ್ಲಲೇಬೇಕು, ಎಂಎಲ್‌ಎ ಆಗಲೇಬೇಕು ಎನ್ನುವ ಹಾಗಿದ್ದರೆ ಸ್ವಲ್ಪ ಮುಂಚೆ ಗೂತ್ತಿದ್ದರೆ ನಾನು ಕೋಲಾರದಿಂದ ಗೆಲ್ಲುತ್ತಿದ್ದೆ.

ಅಧ್ಯಕ್ಷರು: ಆಯಿತು ಸಂತೋಷ.

+ ಶ್ರೀ ಸಿ.ಭೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೆ, ಇವತ್ತು ಇಂಡಿಯನ್ ಎಲೆಕ್ಟ್ರಿಸಿಟಿ ಆಕ್ಟ್‌ಗೆ ಕರ್ನಾಟಕದ ತಿದ್ದುಪಡಿಯನ್ನು ಸರ್ಕಾರ ಮಂಡಿಸಿದೆ. ಇದರ ಬಗ್ಗೆ ನಮ್ಮ ನಾಯಕರು ಆಗಲೇ ಹೇಳಿದ್ದಾರೆ. ನಾವು ಇದನ್ನು ವಿರೋಧ ಮಾಡುವುದಿಲ್ಲ. ನಾನೂ ಕೂಡ ಇದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮೊದಲನೇ ಅಕ್ಷರದಿಂದ ಕೊನೆಯ ಅಕ್ಷರದವರೆಗೂ ಓದಿದ್ದೇನೆ. ಇವತ್ತಿನ ದಿವಸ ಇದು ಥೆಫ್ಟ್ ಆಫ್ ಎನರ್ಜಿ ಎನ್ನತಕ್ಕದ್ದಕ್ಕೆ ಮಾತ್ರ ಸೀಮಿತ ಆಗಿದೆ. ಥೆಫ್ಟ್ ಆಫ್ ಎನರ್ಜಿ ಮಾತ್ರವಲ್ಲ ಕೆಪಿಟಿಸಿಎಲ್‌ನಲ್ಲಿ ನಡೆಯುತ್ತಿರತಕ್ಕದ್ದು ಅಲ್ಲಿ ಸಾಮಾನು, ಸರಂಜಾಮು ಎಂದು ಹೇಳಿ ಏನೇನು ವಿಶಿಷ್ಟವಾಗಿ ಇದೆ ಅಷ್ಟೂ ಕೂಡ ಇವತ್ತು ಕಳ್ಳತನ ಆಗುತ್ತಿದೆ. ಮತ್ತೆ ಅನೇಕ'ಕಡೆ ಟ್ರಾನ್ಸ್‌ಫಾರ್ಮರ್‌ಗಳು ಇರತಕ್ಕವು, ತೆಗೆದಿರತಕ್ಕಂಥವು ವರ್ಷಾನುಗಟ್ಟಲೆ ಎಲ್ಲಿ ತೆಗೆದಿರುತ್ತಾರೆ ಅಲ್ಲೇ ಆ ಸ್ಥಳದಲ್ಲಿಯೇ ಬಿದ್ದಿರುತ್ತವೆ. ಅದನ್ನು ನಾನು ನನ್ನ ಕ್ಷೇತ್ರದಲ್ಲಿ ಕಣ್ಣಾರೆ ಕಂಡಿರತಕ್ಕದ್ದು ಇದೆ. ಅಷ್ಟೇ ಅಲ್ಲ ಅನೇಕ ಟ್ರಾನ್ಸ್‌ಫಾರ್ಮರ್‌ಗಳು ಕೆಳಗಡೆಯಿಂದ ಮೇಲಕ್ಕೆ ಹತ್ತುವುದು. ಕಂಬದ ಮೇಲೆ ಅದನ್ನು ಇಡುವುದು, ಕನೆಕ್ಷನ್ ಕೊಡುವುದು, ಪುನಃ ಕೆಳಗೆ ಬೀಳಿಸತಕ್ಕಂಥಹದು, ಈ ಪರಿಸ್ಥಿತಿ ಇವತ್ತಿನ ದಿವಸ ಇರುವುದು, ಇದು ಕಳೆದ ಹತ್ತಾರು ವರ್ಷಗಳಿಂದ ನನ್ನ ಅನುಭವಕ್ಕೆ ಬಂದಿರತಕ್ಕದ್ದು ಇದೆ. ಈ ರೀತಿಯಾಗಿ ದುರ್ವ್ಯವಹಾರ ಮಾಡತಕ್ಕಂಥವರಿಗೆ ಎಲ್ಲಿದೆ ಶಿಕ್ಷೆ? ಶಿಕ್ಷೆ ಇಲ್ಲ. ಇದು ನನ್ನ ಕ್ಷೇತ್ರದಲ್ಲಿಯೇ ನಡೆದಿರತಕ್ಕ ಘಟನೆ, ನಾನು ಆಗ ಮಂತ್ರಿ ಆಗಿದ್ದೆ. ಒಂದು ಹಳ್ಳಿಗೆ ಹೋದರೆ 'ನೋಡಿ, ಒಂದು ಕಂಬಿ ಕಳ್ಳತನ ಆಯಿತು' ಎಂದು ಕೆಲವರು ಹೇಳಿದರು. ನಾನು ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರನ್ನು ಕರೆದೆ, ಅವರನ್ನು ಕರೆದು ಏನಿದು ಎಂದು ಕೇಳಿದೆ. ಅವರ ಎದುರುಗಡೆಯೇ ಹಳ್ಳಿಯವರೆಲ್ಲಾ ಕೂಡ ಹೇಳಿದರು. ಇಲ್ಲಿರತಕ್ಕ ಲೈನ್‌ಮನ್, ಆ ಇನ್ಸ್‌ಪೆಕ್ಟರ್ ಇಬ್ಬರೂ ಕೂಡ ಇದನ್ನು ಬಿಚ್ಚಿಕೊಂಡು ಹೋದರು ಎಂದು ಹೇಳಿದರು. ನಾನು ಹೇಳಿದೆ, ಏನು ಎಕ್ಸಿಕ್ಯುಟೀವ್ ಇಂಜಿನಿಯರ್ ಅವರೇ, ಏನು ಇದರ ಕಥೆ? ಇದು ಕಳ್ಳತನ ಹೌದೋ ಅಲ್ಲವೋ ಎಂದು ಕೇಳಿದೆ. ಕಳ್ಳತನವೇ ಸ್ವಾಮಿ ಎಂದು ಹೇಳಿದರು. ಹಾಗಾದರೆ ಕಳ್ಳರಿಗೆ ಏನು ಶಿಕ್ಷೆ ಕೊಡುತ್ತಾರೋ ಹಾಗೆ ತಕ್ಷಣ ಕ್ರಿಮಿನಲ್ ಮೊಕದ್ದಮೆ ಅವರ ಮೇಲೆ ಹೂಡಬೇಕು

ಎನ್ನತಕ್ಕದ್ದನ್ನು ಆ ಸ್ಥಳದಲ್ಲಿ ಮಂತ್ರಿಯಾಗಿ ಹೇಳಿದೆ. ಕೊನೆಗೆ ಆಗಲಿಲ್ಲ. ಕೊನೆಗೆ ಆವತ್ತು ಇದ್ದಂತಹ ಅಧ್ಯಕ್ಷರ ಮೇಲೆ ಗಲಾಟೆ ಮಾಡಿದಾಗ ಅವನ ಮೇಲೆ ಕ್ರಿಮಿನಲ್ ಕೇಸ್ ಹೂಡಿದರು. ಇದು ಥೆಫ್ಟ್ ಆಗುವುದಿಲ್ಲವಾ? ಆಮೇಲೆ ಎನರ್ಜಿ ಥೆಫ್ಟ್ ಹೇಗೆ ಆಗುತ್ತದೆ ಎಂದರೆ, ಸಾಮಾನ್ಯವಾಗಿ ರೈತರು ಇವತ್ತಿನ ದಿವಸ ಹಳ್ಳಿಗಳಲ್ಲಿ ಸುಮಾರು ನನ್ನ ಗಮನಕ್ಕೆ ಬಂದಿರುವ ಹಾಗೆ ಎರಡು ಲಕ್ಷ ಪಂಪುಸೆಟ್‌ಗಳಲ್ಲಿ ಕಳ್ಳತನದಿಂದ ವಿದ್ಯುತ್ತನ್ನು ಬಳಸುತ್ತಿದ್ದಾರೆ. ಏಕೆ ಬಳಸುತ್ತಾ ಇದ್ದಾರೆ ಎಂದರೆ ನಿಮ್ಮ ಟಾರ್ಗೆಟ್ ಏನು ಇದೆ ಈ ಟಾರ್ಗೆಟ್ ಇರತಕ್ಕಂಥದ್ದಕ್ಕೂ ಕೂಡ ಇವತ್ತು ರೈತರು ಬದುಕಬೇಕಾಗಿದೆ. ರೈತರು ಬದುಕಬೇಕಾಗಿದ್ದರೆ ಇವತ್ತು ವಿದ್ಯುತ್ ಇಲ್ಲದೇ ಸಾಧ್ಯವಿಲ್ಲ. ಕುಡಿಯುವ ನೀರೂ ಅಷ್ಟೆ, ವಿದ್ಯುತ್ ಸಹ ಅಷ್ಟೆ. ಅವರು ಬದುಕಬೇಕಾಗಿದ್ದರೂ ಸಹ ವಿದ್ಯುತ್ ಬಹಳ ಅವಶ್ಯಕ. ಇವತ್ತು ನಿಮ್ಮ ಟಾರ್ಗೆಟ್ ಒಂದೊಂದು ತಾಲ್ಲೂಕಿಗೆ 200, 250 ಇರುವ ಕಡೆ....

ಅಧ್ಯಕ್ಷರು: ನೀವು ಕಳ್ಳತನದ ಬಗ್ಗೆ ಹೇಳಿ. ಸುಮ್ಮನೆ ಟಾರ್ಗೆಟ್, ಪಂಪುಸೆಟ್ಸ್ ವಿಚಾರ ಬೇಡ.

ಶ್ರೀ ಸಿ.ಭೈರೇಗೌಡ: ಕಳ್ಳತನ ಏಕೆ ಆಗುತ್ತದೆ ಎಂದರೆ ಇವರು ವಿದ್ಯುತ್ತನ್ನು ಕೊಡುವುದಿಲ್ಲ. ಕೊಡದೇ ಇದ್ದಂತಹ ಸಂದರ್ಭದಲ್ಲಿ ರೈತರು ಏನು ಮಾಡುತ್ತಾರೆ?

ಅಧ್ಯಕ್ಷರು: ಅದನ್ನೂ ಸೇರಿಸಿಕೊಳ್ಳಿ ಎಂದು ಹೇಳಿ.

ಶ್ರೀ ಸಿ.ಭೈರೇಗೌಡ: ಪಕ್ಕದಲ್ಲಿಯೇ ಲೈನ್ ಇರುತ್ತದೆ ಲೈನ್‌ಗೆ ಹುಕ್ ಮಾಡುತ್ತಾರೆ ಕಳ್ಳತನ ಮಾಡುತಕ್ಕದ್ದಕ್ಕೆ ಅದು ಅನಿವಾರ್ಯ. ಆ ಕಳ್ಳತನ, ಅದು ಅನಿವಾರ್ಯ.

ಅಧ್ಯಕ್ಷರು: ಅದನ್ನೂ ಆ ಲಿಸ್ಟ್‌ನಲ್ಲಿ ಸೇರಿಸಿ ಎಂದು ತಾವು ಹೇಳುವುದು ಅಷ್ಟೆ. ಅದು ಒಳ್ಳೆಯ ಸಲಹೆ.

ಶ್ರೀ ಸಿ.ಭೈರೇಗೌಡ: ಅನಿವಾರ್ಯ ಆಗುತ್ತಿರುವುದರಿಂದ ಅವರು ಕಳ್ಳತನ ಮಾಡುತ್ತಾರೆ. ಆದರೆ ಬಗಲಲ್ಲಿ ಇರತಕ್ಕವರು ಅಲ್ಲಿ ಕಂಬಿ ಕತ್ತರಿಸತಕ್ಕದ್ದು, ಟ್ರಾನ್ಸ್‌ಫಾರ್ಮರ್ ಕದಿಯತಕ್ಕದ್ದು, ಉಳಿದಿರತಕ್ಕದ್ದು ಮಾಡುವುದು ಅದು ಅನಿವಾರ್ಯವಲ್ಲ. ಅದು ಉದ್ದೇಶಪೂರ್ವಕವಾಗಿ ಕಳ್ಳತನ ಮಾಡತಕ್ಕದ್ದು. ಮೊದಲು ಶಿಕ್ಷೆ ಕೊಡಬೇಕಾಗಿರುವುದು ಯಾರಿಗೆ ಅಂದರೆ, ಇವರಿಗೆ ಯಾರು ಅನಿವಾರ್ಯತೆಯಿಂದ ಕಳ್ಳತನ ಮಾಡುತ್ತಾರೋ ಅವರಿಗಿಂತ ಮೊದಲು ಉದ್ದೇಶಪೂರ್ವಕವಾಗಿ ಯಾರು ಕಳ್ಳತನಮಾಡುತ್ತಾರೋ ಅವರಿಗೆ ಶಿಕ್ಷೆ ಕೊಡಬೇಕಾಗಿರುವುದು. ಇದು ಅತಿ ಅವಶ್ಯಕ. ಆದ್ದರಿಂದ ಈ ಬಿಲ್ಲನ್ನು ನೋಡಿದಾಗ

ಅದರ ಬಗ್ಗೆಯೂ ಕೂಡ ಏನೂ ಇಲ್ಲ, ಎಲ್ಲೋ ಇದೆ ಎಂದು ಹೇಳುತ್ತಾರೆ. ಈಗ ಅವರು ಅಂಕೆ ಅಂಶ ಕೊಡಬೇಕಾಗುತ್ತದೆ. ಈ ರೀತಿ ಮಾಡಿದವರ ಬಗ್ಗೆ ಎಷ್ಟು ಮೊಕದ್ದಮೆಗಳನ್ನು ಈ ಕೆಪಿಟಿಸಿಎಲ್‌ನವರು ಹೂಡಿದ್ದಾರೆ ಎನ್ನತಕ್ಕದ್ದರ ಬಗ್ಗೆ ಇವರು ಏವರ ಕೊಡಬೇಕು ಎಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. 'ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕುವ ಕೆಲಸ' ಬೇಡ.

ಅಧ್ಯಕ್ಷರು: ಅದನ್ನು ಸೇರಿಸುತ್ತಾರೆ ಬಿಡಿ. ರೂಲ್ಸ್‌ನಲ್ಲಿ ಮಾಡಿ.

ಶ್ರೀ ಸಿ.ಭೈರೇಗೌಡ: ಅದು ಇರತಕ್ಕ ಕಾನೂನೇ. ಅಲ್ಲಿ ಯಾರು ನಿಜವಾಗಿ ಕೂಡ ಉದ್ದೇಶಪೂರ್ವಕವಾಗಿ ಕಳ್ಳತನ ಮಾಡುತ್ತಾರೋ ಅವರ ಮೇಲೆ ಲಾಗೂ ಮಾಡತಕ್ಕದ್ದು ಇಲ್ಲ, ಈ ತಿದ್ದುಪಡಿಯಲ್ಲಿ ಅದು ಇಲ್ಲ. ಇನ್ನು ಸೇರಿಸುವುದು ಎಲ್ಲಿ ಬಂತು? ಈ ತಿದ್ದುಪಡಿಯಲ್ಲಿ ಇಲ್ಲ, ಎಲ್ಲೋ ಇದೆ ಎಂದು ಹೇಳುತ್ತಿದ್ದಾರೆ. ಇದರ ಜೊತೆಗೆ ಅದನ್ನೂ ಕೂಡ ತಂದಿದ್ದರೆ, ಅಂಥವರಿಗೂ ತಂದಿದ್ದರೆ ನಾನಂತೂ ಇನ್ನೂ ಹೆಚ್ಚಿನ ಸಂತೋಷ ಪಡುತ್ತಿದ್ದೆ. ಈಗ ತಂದಿರತಕ್ಕ ಕಾನೂನನ್ನು ವಿರೋಧ ಮಾಡುವುದಿಲ್ಲ. ಹಾಗೆ ವಿರೋಧ ಮಾಡದೆ ಮತ್ತು ನಾವು ಈ ರೀತಿಯಾಗಿ ಕೊಟ್ಟರತಕ್ಕ ಸಲಹೆಯನ್ನು ಕಳ್ಳತನ ಎಂದರೆ ಎಲ್ಲವೂ ಕಳ್ಳತನ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದ್ದರಿಂದ ನಾನು ಮೇಲೆ ಹೇಳಿರುವ ಅವರೆಲ್ಲರನ್ನೂ ಕೂಡ ಶಿಕ್ಷೆಗೆ ಗುರಿ ಮಾಡಬೇಕು ಎನ್ನತಕ್ಕ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ.ಚಂದ್ರೇಗೌಡ(ಸಂಸದೀಯ, ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಈ ಮಸೂದೆ ಬಗ್ಗೆ ಸುದೀರ್ಘವಾಗಿ ಶ್ರೀಮಾನ್ ರಾಮದಾಸ್ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮಾತನಾಡಿದಂತಹ ಎಲ್ಲಾ ಸದಸ್ಯರೂ ಸಹ ಈ ಮಸೂದೆಯನ್ನು ಸ್ವಾಗತ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಆಭಾರಿ ಆಗಿದ್ದೇನೆ. ಈ ಶಾಸನದ ತಿದ್ದುಪಡಿಗೆ ಕಾರಣಗಳನ್ನು ನಾನು ಆಗಲೇ ಹೇಳಿದ್ದೇನೆ ಮತ್ತು ಅದರ ಅವಶ್ಯಕತೆ ಏನು ಎನ್ನುವುದನ್ನೂ ಸಹ ಹೇಳಿದ್ದೇನೆ. ಒಂದು ಮಾತನ್ನು ಶ್ರೀಮಾನ್ ರಾಮದಾಸ್ ಅವರು ಹೇಳಿದರು. ಈಗ ಭಾರತ ಸರ್ಕಾರದ ಆರ್ಡಿನೆನ್ಸ್ ರೀಪ್ಲೇಸ್ ಬಿಲ್ ಚರ್ಚೆ ಆಗುತ್ತಿದೆ. ಅದರ ಮಾದರಿಯಲ್ಲಿ ಮಾಡಬೇಕು ಎಂದು ಹೇಳಿದರು. ಆ ಮಾದರಿಯಲ್ಲಿ ಮಾಡುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಆದರೆ ತತ್‌ಕ್ಷಣ ಈಗ ಆಗಬೇಕಾಗಿರುವ ಕೆಲಸಗಳನ್ನು ನಾವು ಮಾಡಿದ್ದೇವೆ. ಮತ್ತೆ ಆಂಧ್ರ ಪ್ರದೇಶದ ಮಸೂದೆಯ ತದ್ರೂಪು ಇಲ್ಲಿ ತಂದಿದ್ದಾರೆ ಎಂದು ಹೇಳಿ ಕೆಲವು ಮಾನ್ಯ ಸದಸ್ಯರು ಹೇಳಿದರು, ತಪ್ಪೇನೂ ಇಲ್ಲ. ಆಂಧ್ರಪ್ರದೇಶದವರು ಮಸೂದೆ ತಂದಿದ್ದಾರೆ ಎಂದು ಹೇಳಿ ಅದೇ ಮಾದರಿಯಲ್ಲಿ ತರುವುದು ಅಪರಾಧ ಏನೂ ಅಲ್ಲ. ಆದರೆ ಅವರ ಒಂದು ಶಂಕೆ ಏನು ಅಂದರೆ ಸೆಕ್ಷನ್ 49(ಸಿ)ನಲ್ಲಿ ಸ್ಪೆಷಲ್ ಕೋರ್ಟ್‌ಗೆ ಪ್ರಾಪರ್ಜನ್

ಮಾಡಿದ್ದೀರಿ, ಆದರೆ ಟ್ರಬ್ಯೂನಲ್ ಮಾಡಿಲ್ಲ. ಟ್ರಬ್ಯೂನಲ್ ಆದರೂ ಮಾಡಿ, ಸ್ಪೆಷಲ್ ಕೋರ್ಟ್ ಆದರೂ ಮಾಡಿ, ಆರ್ಡಿನರಿ ಆದರೂ ಮಾಡಿ. We cannot take away the jurisdiction of the High Court and the Supreme Court. HighCourt has original jurisdiction under Articles 226 and 227 of the Constitution and under Article 32 of the Constitution, the original jurisdiction of the Supreme Court is there. ಇವನ್ನಂತೂ ತೆಗೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವು ಅದನ್ನು ಇಲ್ಲಿ ಏಕೆ ಕಡಿಮೆ ಮಾಡಿದ್ದೇವೆ ಎಂದರೆ ಸ್ಪೆಷಲ್ ಕೋರ್ಟಿನ ಮೇಲೂ ಆರ್ಟಿಕಲ್ 226 ಮತ್ತು 227ನಲ್ಲಿ ದಾವೆ ಹೋಗಬಹುದು, the original jurisdiction of the High Court, ಮತ್ತೆ ಅದಕ್ಕೆ ಒಂದು ಟ್ರಬ್ಯೂನಲ್ ಎಂದು ಮಾಡಿ, ಅಲ್ಲಿಗೆ ಅಪೀಲ್ ಹೋಗಿ ಮತ್ತೆ ಹೈಕೋರ್ಟಿಗೆ ಹೋಗುವ ಬದಲು ಈಗ ಇರತಕ್ಕಂತಹ ಸ್ಪೆಷಲ್ ಕೋರ್ಟಿಗೆ ಸಾಕಷ್ಟು ಪವರ್ಸ್ ಅನ್ನು ಕೊಡುವುದು. ಹಾಗೆ ಪವರ್ಸ್ ಕೊಟ್ಟು ಅಲ್ಲೇ ತೀರ್ಮಾನ ಮಾಡತಕ್ಕಂತಹ ಒಂದು ವ್ಯವಸ್ಥೆ. ಅದಕ್ಕಾಗಿಯೇ ನೀವು ಕಾಂಪೌಂಡಿಂಗ್ ಏಕೆ ಇಟ್ಟುಕೊಂಡಿದ್ದೀರಿ ಎಂದು ಮಾನ್ಯ ಮಾಜಿ ಜಡ್ಜ್ ಸಾಹೇಬರು ಆದಂತಹ ಶ್ರೀ ಮುದ್ದಹನುಮೇಗೌಡರು ಕೇಳಿದ್ದಾರೆ. ಅದರ ಜೊತೆಯಲ್ಲಿಯೇ, now it is the order of the day-arbitration and conciliation, ಎಂದು ಹೇಳಿ, ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ಹೇಳಿ ರಾಷ್ಟ್ರದಾದ್ಯಂತ ಚರ್ಚೆ ಆಗುತ್ತಿದೆ, ರಾಜ್ಯದಾದ್ಯಂತ ಚರ್ಚೆ ಆಗುತ್ತಿದೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಕಾಂಪೌಂಡಿಂಗ್ ಆಫ್ ಅಫೆನ್ಸಸ್ ಪ್ರಕರಣಗಳನ್ನು ವಿಶೇಷ ನ್ಯಾಯಾಧೀಶರಿಗೆ ವಹಿಸಿಕೊಡಬೇಕೆಂದು ನಾನು ಹೇಳಿದ್ದೇನೆ. Let these powers be vested with the special Judge. Why do you keep those powers with an officer; to try these offences, when we have appointed a Special Judge. Why should we keep such powers with an officer? Let it be given to the Special Judge.

Sri. D.B.CHANDRE GOWDA: Even then the matter has to go before court. ನಾವು ಇಲ್ಲಿ ಕಾಂಪೌಂಡಿಂಗ್ ಮಾಡಿದರೆ, ಆ ಕೋರ್ಟಿನಲ್ಲಿ ದಾವೆ ತೀರ್ಮಾನವಾಗಬೇಕಾದರೆ ಕೋರ್ಟ್ ಮುಂದೆ ನಾವು ಹೋಗಬೇಕಾಗುತ್ತದೆ. ಅದರ ಕಾರ್ಯ ವಿಧಾನ ಅವರಿಗೆ ಗೊತ್ತಿರುವುದರಿಂದ ಅದರ ಪ್ರಕಾರವೇ ಕೋರ್ಟಿಗೆ ಹೋಗಬೇಕಾಗುತ್ತದೆ. ಕೋರ್ಟ್ ಅದನ್ನು ಒಪ್ಪಿಕೊಂಡು

ತೀರ್ಮಾನ ಕೊಡಬೇಕಾಗುತ್ತದೆ. ಇದೊಂದು ರೀತಿ ಔಟ್ ಆಫ ದಿ ಕೋರ್ಟ್ ಸೆಟ್ಲ್‌ಮೆಂಟ್ ಇದ್ದಂತೆ. ಆರ್ಬಿಟ್ರೇಷನ್‌ನಲ್ಲಿ ಅಥವಾ ಕಾಂಪೌಂಡಿಂಗ್‌ನಲ್ಲಿ it is a provision for out of court settlement. ಈ ಕಳ್ಳತನ ಮಾಡಿದ್ದು, ತಾಂತ್ರಿಕ ಸದಸ್ಯರಾರೂ ಇಲ್ಲದಿರುವುದರಿಂದಲೇ ಶೇಕಡ 5 ರಿಂದ 10ರಷ್ಟು ಕೂಡ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿಕ್ಷೆಯಾಗುವುದಿಲ್ಲವೆನ್ನುವ ಶಂಕೆಯನ್ನು ಮಾನ್ಯ ಸದಸ್ಯರಾದ ರಾಮದಾಸ್‌ರವರು ಅಭಿವ್ಯಕ್ತಿಪಡಿಸಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ, ಆರ್ಟಿಕಲ್ 226ರಂತೆ ಹೈಕೋರ್ಟ್‌ಗೆ ಹೋದರೆ ತಾಂತ್ರಿಕ ಸದಸ್ಯರನ್ನು ಎಲ್ಲಿ ತರುತ್ತೀರಿ? ಈ ಕ್ಲಾಜ್ ಇದ್ದೇ ಇರುತ್ತದೆ. ಇದರ ಮಧ್ಯೆ ನಾವು ಬದುಕಿರಬೇಕಾಗುತ್ತದೆ. ಆದುದರಿಂದ, ಮಾನ್ಯ ಸದಸ್ಯರು ನೀಡಿರುವ ಉತ್ತಮ ಸಲಹೆ, ಆಲೋಚನೆಗಳನ್ನು ನಾನು ಪರಿಶೀಲಿಸುವುದಕ್ಕೆ ಸಂಬಂಧಪಟ್ಟ ಇಲಾಖಾಧಿಕಾರಿಗಳಿಗೆ ತಿಳಿಸುತ್ತೇನೆ. ಮೇಲಾಗಿ ಅವರ ಪಿಜಿಲೆನ್ಸ್ ಇದೆ, ಮೂಗಿಗಿಂತ ಮೂಗುತಿನೇ ಭಾರ ಆಗಿದೆ. ವಕೀಲರುಗಳಿಗೆ ಕೊಟ್ಟ ಫೀ ಎಷ್ಟು ಅಂತ ನಾವು ರಾಜ್‌ಕುಮಾರ್ ಕೇಸ್‌ನಲ್ಲಿ ಸುಪ್ರೀಂಕೋರ್ಟಿನ ಲಾಯರಿಗೆ ಎಷ್ಟು ಫೀ ಕೊಟ್ಟೆವು ಎಂಬುದನ್ನು ಇಲ್ಲಿ ಹೇಳುವ ಹಾಗೆ ಇಲ್ಲ. ಹಾಗೆಯೇ ಲಾಯರ್‌ಗಳಿಗೆ ಫೀ ಕೊಡದಿದ್ದರೆ ಕೇಸ್ ಮುಂದೆ ಹೋಗುವುದಿಲ್ಲ. ಈ ಕ್ರಿಮಿನಲ್ ದಾವಾದಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗುತ್ತದೆ ಅನ್ನುವುದು ಮುಖ್ಯವೇ ಹೊರತು ಯಾವ ರೀತಿ ಕೇಸ್‌ಗಳು ನಡೆಯುತ್ತವೆ ಎಂಬುದು ಮುಖ್ಯವೇ ಹೊರತು ಅದರಿಂದ ವಸೂಲಿ ಎಷ್ಟು ಆಯಿತು ಎಂಬುದು ಮುಖ್ಯವಾಗುವುದಿಲ್ಲ. ವಕೀಲರಿಗೆ ಕೊಡುವ ಫೀ ಮೇಲೆ ಕೇಸ್ ಲೆಕ್ಕ ಹಾಕಲು ಆಗುವುದಿಲ್ಲ. ಪಿಜಿಲೆನ್ಸ್ ಸೆಲ್ ತುಂಬಾ ಒಳ್ಳೆಯ ಕೆಲಸ ಮಾಡಿದೆ. ನಾನು ಒಂದು ಮಾತನ್ನು ಸದಸ್ಯರಾದ ರಾಮದಾಸ್‌ರವರಿಗೆ ಹೇಳಿದೆ. Section 39Aof the Indian Electricity Act also provides penal provision for the abetment of the offence. Therefore, Abetment of the offence is taken care of under section 39 itself. An Officer of the KPTCL who abets who helps for the commitment of the offence, that man is covered under Section 39A.

ಶ್ರೀ ಸಿ.ಭೈರೇಗೌಡ: ಇದುವರೆಗೂ ಎಷ್ಟು ಜನರಿಗೆ ಶಿಕ್ಷೆಯಾಗಿದೆ? ಎಷ್ಟು ಜನರ ಮೇಲೆ ದಾವೆ ಹಾಕಿದ್ದೀರಿ ಎಂಬುದನ್ನು ಹೇಳಬೇಕಾಗುತ್ತದೆ. ಏಕೆಂದೆರೆ, ಪುಸ್ತಕದಲ್ಲಿ ಕಾನೂನು ಇದ್ದು, ಕಾನೂನನ್ನು ಜಾರಿಗೊಳಿಸದಿದ್ದರೆ it is as good as nothing. ತಿದ್ದುಪಡಿ ತಂದಿರುವ ಅವಶ್ಯಕತೆ ಕುರಿತಂತೆಯೂ ತಾವು ಹೇಳಬೇಕಾಗುತ್ತದೆ. ಎಂತಹುದೇ ಕಾನೂನಿದ್ದರೂ ಅದನ್ನು ಜಾರಿಗೊಳಿಸದಿದ್ದರೆ

ಅದರಿಂದ ಏನು ಪ್ರಯೋಜನ?

ಶ್ರೀ ಡಿ.ಬಿ.ಚಂದ್ರೇಗೌಡ: ಕಾನೂನನ್ನು ಜಾರಿಗೊಳಿಸಿದ ಕೆಲವು ಪ್ರಕರಣಗಳ ಅಂಕಿ-ಅಂಶಗಳನ್ನು ಅವರೇ ಕೊಟ್ಟಿದ್ದಾರೆ. ನಾವು ಕಣ್ಣಾರೆ ಕಂಡಂಥ ಕೊಲೆ ಪ್ರಕರಣಗಳು ಎಷ್ಟೋ ಸಲ ವಜಾ ಆಗುತ್ತವೆ. ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ? ಅದುವೇ ಕಾನೂನು! ಹಳೆಯ ಎವಿಡೆನ್ಸ್ ಆಕ್ಟ್, ಕ್ರಿಮಿನಲ್ ಪ್ರೊಸೀಜರ್ ಕೋಡ್, ಇವೆಲ್ಲವೂ ಬ್ರಿಟೀಷರು ಬಿಟ್ಟು ಹೋಗಿರುವ ಆಸ್ತಿಯಾಗಿದ್ದು ಈ ಆಸ್ತಿಯನ್ನು ಬದಲಾಯಿಸುವ ಅಧಿಕಾರ ನಮಗಿಲ್ಲ. ಇದನ್ನು ಪಾರ್ಲಿಮೆಂಟಿಗೆ ತೆಗೆದುಕೊಂಡು ಹೋಗಿ ಅವರು ಮರುಪರಿಶೀಲನೆ ನಡೆಸಬೇಕು. ಸರ್ಕಾರ ಬರೀ ಆಲೋಚಿಸಬಹುದಷ್ಟೆ. ಇದು 'ಇಥೋಪಿಯನ್ ಥಿಯರಿ' ಅಷ್ಟೇ. ವಾಸ್ತವವಾಗಿರುವ ಕಷ್ಟಗಳನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಸಿ.ಭೈರೇಗೌಡ: ಕಾನೂನು ಭಾರತದ್ದೇ ಆಗಿರುವುದರಿಂದ ಇದು ಎಷ್ಟರಮಟ್ಟಿಗೆ ಜಾರಿಯಾಗಿದೆ ಎಂಬುದನ್ನು ಹೇಳಬೇಕು. ಯಾವುದಕ್ಕೆ ಯಾವುದೋ ಉತ್ತರ ಕೊಟ್ಟರೆ ಹೇಗಾಗುತ್ತದೆ?

ಶ್ರೀ ಡಿ.ಬಿ.ಚಂದ್ರೇಗೌಡ: ಇನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಆಡಳಿತ ನಿರ್ವಹಣೆಯಲ್ಲಿ ಸರ್ಕಾರ ಹಸ್ತಕ್ಷೇಪವೆಸಗಬಾರದೆಂದು ಮಾನ್ಯ ಹಿರಿಯ ಸದಸ್ಯರಾದ ಪಿ.ಜಿ.ಆರ್.ಸಿಂಧ್ಯರವರು ಬಹಳ ಉತ್ತಮ ಸಲಹೆ ನೀಡಿದ್ದು, ಈ ಬಗ್ಗೆ ಅವರಿಗೆ ನಾನು ಆಶ್ವಾಸನೆ ನೀಡುತ್ತಿರುವುದೇನೆಂದರೆ, ನಾವು ಈ ಹಿಂದೆ ತಂದಿದ್ದ ಮಸೂದೆಯಲ್ಲಿ ಸರ್ಕಾರ ನೀತಿ ನಿರ್ದೇಶನವನ್ನಷ್ಟೇ ಕೊಡಬೇಕಿತ್ತೇ ಏನಾ ಉಳಿದಂತೆ ಎಲ್ಲಾ ಅಧಿಕಾರವನ್ನು ಕೆ.ಇ.ಆರ್.ಸಿ.ಗೆ ವಹಿಸಿಕೊಡುವ ಶಾಸನಗಳನ್ನೊಳಗೊಂಡ ಮಸೂದೆಯನ್ನು ನಿನ್ನೆ ಮಂಡಿಸಿ ಅಂಗೀಕರಿಸಲ್ಪಟ್ಟಿರುತ್ತದೆ. KERC will decide as to what is to be done by the KPTCL. ನಾವು ಸಬ್ಸಿಡಿ ಕೊಟ್ಟರೂ, ಎಷ್ಟು ಪ್ರಮಾಣದಲ್ಲಿ ಸಬ್ಸಿಡಿ ಕೊಡಬೇಕು? ಯಾವ ಕಾಲದಲ್ಲಿ? ಯಾವ ರೂಪದಲ್ಲಿ ಕೊಡಬೇಕೆಂಬ ತನ್ನ ಜವಾಬ್ದಾರಿಯನ್ನೂ ಕೂಡ ಸರ್ಕಾರ ಕೆ.ಇ.ಆರ್.ಸಿ.ಗೆ ವಹಿಸಿಕೊಟ್ಟಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಸರ್ಕಾರದ ಮೇಲೆ ಆಪಾದನೆ ಬರುವುದು ಬೇಡವೆಂದು ತಿಳಿದು ನಿಮ್ಮ ಮೇಲಿದ್ದ ಜವಾಬ್ದಾರಿಯನ್ನು ಅವರಿಗೆ ಹೊರಿಸಿದಿರಿ. ಇಡಿಷ್ಟು ಮಾತ್ರವೇ ನೀವು ಮಾಡಿದ್ದು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಸದಸ್ಯರ ವಾದ ಹೇಗಿದೆಯೆಂದರೆ, ಹಿಟ್ಟು ತೆಳುವಾದಲ್ಲಿ ದೋಸೆ ಹುಯ್ಯುತ್ತೀರಿ, ಸ್ವಲ್ಪ ಗಟ್ಟಿಯಾದರೆ ರೊಟ್ಟಿ ತಟ್ಟುತ್ತೀರಿ. ನಾನು

ಅಂತಹುದನ್ನು ಮಾಡವುದಿಲ್ಲ. ಯಾವುದು ಸರಿ ಇದೆಯೋ ಅದನ್ನು ಮಾಡುತ್ತೇನೆ. ಇವರು ತಮಗೆ ಅನುಕೂಲವಾಗುವ ಹಾಗೆ ವಾದ ಮಾಡುತ್ತಾರೆ. ನನ್ನ ಪಾಯಿಂಟ್ ಅದಲ್ಲ.

ಶ್ರೀ ಎಸ್.ಸುರೇಶ್‌ಕುಮಾರ್: ಇದನ್ನೇ ನಿಮಗೆ ಅನ್ವಯಿಸಿ ಹೇಳುವುದಾದರೆ, ನೀವು ಇಲ್ಲಿದ್ದಾಗ (ವಿರೋಧ ಪಕ್ಷದಲ್ಲಿ) ವಿರೋಧ ಪಕ್ಷದ ನಾಯಕರು. ಅತ್ತ ಕಡೆ (ಆಡಳಿತ ಪಕ್ಷ) ಹೋದಾಗ ನಾವು ಮಾಡಿದ್ದೆಲ್ಲವೂ ತಪ್ಪು ಅಂತಲೇ?

ಶ್ರೀ ಡಿ.ಬಿ.ಚಂದ್ರೇಗೌಡ: ಬೇಕಿದ್ದರೆ, ತಾವು ದಾಖಲೆಗಳನ್ನು ತೆಗೆದು ನೋಡಬಹುದು. ನಾನು ವಿರೋಧ ಪಕ್ಷದ ನಾಯಕನಾಗಿದ್ದ ಸಂದರ್ಭದಲ್ಲಿ ರಚನಾತ್ಮಕವಾಗಿರುವ ಸಲಹೆಗಳನ್ನೇ ಕೊಟ್ಟಿರುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್: ಆದರೆ, ತಾವು ಮಾತಿಗೆ ಮುಂಚೆ ರೂಲ್ಸ್ ಪುಸ್ತಕ ತೆಗೆಯುತ್ತಿರಲಿಲ್ಲ. ಶೂನ್ಯ ವೇಳೆಯಲ್ಲಿ ತಾವು ಯಾವ್ಯಾವ ವಿಚಾರಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುವುದನ್ನು ನಾನು ಗಮನಿಸಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ರೂಲ್ಸ್ ಪುಸ್ತಕವನ್ನು ನನ್ನಷ್ಟು ನೀವ್ಯಾರೂ ಕೂಡ ಇನ್ನೂ ಕೋಟ್ ಮಾಡಿಲ್ಲ. ಮಾನ್ಯ ಸದಸ್ಯರಾಗಿದ್ದ ವಿಕಾಂತಯ್ಯನವರು ಆ ವಿಚಾರದಲ್ಲಿ ತಜ್ಞರಿದ್ದಾರೆ. ಅದರಲ್ಲಿ ಎರಡನೇ ಮಾತಿಲ್ಲ. ಇನ್ನು ಮುಖ್ಯ ವಿಚಾರಕ್ಕೆ ಬರುವುದಾದರೆ, ಶೇಕಡ 75ರಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ನಾವು 'ಕಪಿಕಾ'ದಿಂದಲೇ ಕೊಂಡುಕೊಳ್ಳುತ್ತಿದ್ದೇವೆ. It is a Governmental organisation. We have no option. ಉಳಿದ ಶೇಕಡ 25ರಷ್ಟು ಟ್ರಾನ್ಸ್‌ಫಾರ್ಮರ್‌ಗಳನ್ನು ಇತರೆಡೆಗಳಿಂದ ಕೊಂಡು ಕೊಳ್ಳುತ್ತಿದ್ದೇವೆ. ಆನಂತರ, ಫೈಲ್ಯೂರ್ ರೇಟ್ ಆಫ್ ಟ್ರಾನ್ಸ್‌ಫಾರ್ಮರ್ ಬಗ್ಗೆ ಹೇಳುವುದಾದರೆ, ಹಿಂದೆ ಶೇಕಡ 23ರಷ್ಟಿದ್ದುದು ಈಗ ಶೇಕಡ 19ರಷ್ಟಾಗಿದ್ದು ಅಂದರೆ, ಶೇಕಡ ನಾಲ್ಕರಷ್ಟು ಕಡಿಮೆಯಾಗಿದೆ. ಇದು ಒಳ್ಳೆಯ ಬೆಳವಣಿಗೆ ಎಂದು ನಾನು ಹೇಳಲಿಲ್ಲ. ಅದನ್ನು ಇನ್ನಷ್ಟು ಉತ್ತಮಗೊಳಿಸಲು ತಾವು ನೀಡಿರುವ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಅಲ್ಲದೆ, ಗುಣಮಟ್ಟವೂ ಸಹ ಸಾಕಷ್ಟು ಸುಧಾರಿಸಿದೆಯೆಂಬ ವಿಚಾರವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಪಿ.ಪಿ.ಆರ್.ಐ. ಇದ್ದು ಎಲ್ಲಾ ವ್ಯವಸ್ಥೆಯನ್ನು ಸಾಕಷ್ಟು ಮಾಡಿದ್ದೇವೆ. ಯಾರಿಗೂ ಕೂಡ ಕರೆಂಟ್ ಮುಟ್ಟಲು ಹೆದರಿಕೆ! ವಿರೋಧ ಪಕ್ಷವಿರಬಹುದು, ಆಳುವ ಪಕ್ಷದವರಿರಬಹುದು, ಕೆಪಿಟಿಸಿಎಲ್ ಇರಬಹುದು, ರೈತರಿರಬಹುದು, ಎಲ್ಲರಿಗೂ ಕೂಡ ಕರೆಂಟ್ ಮುಟ್ಟಲು ಭೀತಿ ಇದೆ. ಇದನ್ನು ಯಾರು ಮುಟ್ಟುತ್ತಾರೋ ಅವರ ಪ್ರಾಣಕ್ಕೆ ಎರವಾಗುವುದು ಕಟ್ಟಿಟ್ಟ ಬುತ್ತಿ, ಆದುದರಿಂದ, ಈ

ಕುರಿತು ಏಸ್ತಾರವಾಗಿ ಚರ್ಚಿಸುವುದಕ್ಕೆ ಮಾಡಿದಷ್ಟು ನಮಗೇ ತೊಂದರೆ ಎಂಬ ಮಾತನ್ನು ಹೇಳುತ್ತಾ, ಎಷ್ಟು ಸಾಧ್ಯವೋ ಅಷ್ಟು ಉತ್ತಮಗೊಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆಂದೂ, ಆ ಪ್ರಯತ್ನದ ಒಂದು ಭಾಗವೇ ಈ ಮಸೂದೆಯಾಗಿರುವುದರಿಂದ, ತಾವೆಲ್ಲರೂ ಇದಕ್ಕೆ ಮಂಜೂರಾತಿ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎ.ರಾಮದಾಸ್: ತಾಂತ್ರಿಕ ಸದಸ್ಯರೊಬ್ಬರು ಇರಬೇಕೆಂಬ ವಿಚಾರವನ್ನು ನಾವು ಸ್ವಾಗತಿಸಿದ್ದೇವೆ. ನ್ಯಾಯಾಲಯದಲ್ಲಿರುವ ಎಲ್ಲಾ ಪ್ರಕರಣಗಳ ಬಗ್ಗೆ ನಾನು ಹೇಳಲು ಹೋಗುವುದಿಲ್ಲ. ಆದರೆ, ಸೆಷನ್ ಜಡ್ಜ್ ಆದವರು ಆ ಸಂದರ್ಭದಲ್ಲಿ ಎಲ್ಲಾ ಪ್ರಕರಣಗಳನ್ನು ತಾಂತ್ರಿಕವಾಗಿ ಅರ್ಥೈಸಿಕೊಳ್ಳುವುದಕ್ಕಾಗುವುದಿಲ್ಲವೆಂದು ತಾಂತ್ರಿಕ ಸದಸ್ಯರೊಬ್ಬರನ್ನು ಸೇರಿಸುವ ಕೆಲಸ ಮಾಡಿದ್ದೀರಿ. ಸೆಕ್ಷನ್ 49(ಡಿ) 1(ಎ)ಗೆ ಸಂಬಂಧಿಸಿದಂತೆ ಥರ್ಡ್ ಪ್ರಾವಿಜೋ ಮಾಡಬೇಕೆಂದು ನಾನು ಪತಕ್ಕೋಸ್ಕರ ಕೇಳಕೊಂಡೆನೆಂದರೆ ಮಾನ್ಯ ಹಿರಿಯ ಸದಸ್ಯರಾದ ಪಿ.ಜಿ.ಆರ್.ಸಿಂಧ್ಯರವರು ತಿಳಿಸಿದಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವಿಜಿಲೆನ್ಸ್ ಸೆಲ್‌ಗೆ ಒಂದು ಸಲ ಹೋದಂತಹವರು ಹೊರಗಡೆ ಬರುವುದರೊಳಗಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಆಸ್ತಿ ಮಾಡಿರುವ ಅನೇಕ ನಿದರ್ಶನಗಳನ್ನು ಈಗಾಗಲೇ ತಮ್ಮ ಮುಂದಿಟ್ಟಿದ್ದೇವೆ. ನಾನು ಈ ವಿಚಾರವನ್ನು ಏಕೆ ಹೇಳುತ್ತಿದ್ದೇನೆಂದರೆ, ಉದಾಹರಣೆಗೆ, ಯಾವುದೋ ಒಂದು ಪ್ರಕರಣದಲ್ಲಿ ಧಾಳಿ ನಡೆಸಲಾಗುತ್ತದೆ, ಧಾಳಿ ನಡೆಸಲು ಆಧಾರವಾಗಿರುವುದು ಯಾರಿಂದಲೋ ಬಂದಿರುವ ಅನಾಮಧೇಯ ಪತ್ರ ಅಥವಾ ಆ ರೀತಿ ಮಾಹಿತಿ ನೀಡುವವರನ್ನು ಗೌಪ್ಯವಾಗಿರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಆದರೆ, ಗೌಪ್ಯವಾಗಿ ಪಡೆದುಕೊಳ್ಳುವ ಮಾಹಿತಿಯಿಂದ ಎಷ್ಟು ಪ್ರಕರಣಗಳಲ್ಲಿ ದಾಳಿ ನಡೆಸಲಾಗಿದೆ ಮತ್ತು ಎಷ್ಟು ಪ್ರಕರಣಗಳನ್ನು ನೋಂದಾಯಿಸಿಕೊಳ್ಳಲಾಗಿದೆ ಎಂಬುದೂ ಸಹ ಬಹಳ ರಹಸ್ಯವಾಗುಳಿದಿದೆ. ಇದರ ಜೊತೆಗೆ ಎಫ್.ಐ.ಆರ್. ಹಾಕಿದ ಮೇಲೆ ಚಾರ್ಜ್‌ಶೀಟ್ ಹಾಕುವ ಮಧ್ಯೆ ನಡೆಯುವ ವ್ಯವಹಾರದಲ್ಲಿ ಮುಂದೆ ಕೇಸುಗಳು ಫೈಲೂರ್ ಆಗುವಂಥ ವ್ಯವಸ್ಥೆಗಳನ್ನು ಮಾಡುತ್ತಾರೆ. ವಿದ್ಯುತ್‌ನ್ನು ಮುಟ್ಟಲು ಎಲ್ಲರಿಗೂ ಹೆದರಿಕೆಯೆಂದು ತಾವು ಹೇಳಿದ್ದೀರಿ. ಆದರೆ ವಿದ್ಯುತ್ ಮುಟ್ಟಿದಂಥವರಿಗೆ ಎಲ್ಲಾ ಹಂತಗಳಲ್ಲಿ ಸಹಕಾರವನ್ನು ಕೊಡುವಂಥವರನ್ನು ಮುಟ್ಟುವುದು ಸರ್ಕಾರಕ್ಕೆ ಬಹಳ ಕಷ್ಟವಾಗಿದೆ. ವಿದ್ಯುತ್‌ನ ಶಾಕ್‌ಗಿಂತಲೂ ಹೆಚ್ಚು ಶಾಕ್‌ನ್ನು ಕೊಡುವಂಥ ಆ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿ. ವಿದ್ಯುತ್‌ನ್ನು ಕಳ್ಳತನ ಮಾಡಲು ಅವರೇ ಹೇಳಿರುತ್ತಾರೆ, ಅವರೇ ಕೇಸನ್ನು ಹಾಕಿರುತ್ತಾರೆ, ಅವರೇ ನ್ಯಾಯಾಲಯದಲ್ಲಿ ಹೇಳಿಕೆ ಕೊಟ್ಟಿರುತ್ತಾರೆ, ಕೆ.ಪಿ.ಟಿ.ಸಿ.ಎಲ್.-ಯೇ ವಾದವನ್ನು ಮಾಡಿರುತ್ತದೆ. ಆದರೂ ಕೇಸು ಏಕೆ ಬಿದ್ದು ಹೋಗಿರುತ್ತದೆಂದರೆ just because of adjustment. ಆದ್ದರಿಂದ

ಅಧಿಕಾರಿಗಳು ಯಾರು ಇರುತ್ತಾರೆ ಅವರನ್ನು ಜವಾಬ್ದಾರರನ್ನಾಗಿ ಮಾಡಿ ಅಕೌಂಟಬಲಿಟಿ ಕೊಡಿಯೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಮೀಸಲಾತಿಯ ಬಗ್ಗೆ ಪ್ರಶ್ನಿಸಿ ತಾವು ಕೋರ್ಟ್‌ಗೆ ಹೋದಿರಿ. ಅದರಲ್ಲಿ ತಾವು ಫಲರಾದಿರಿ. ಏಕೆ? ಹಾಗೆಯೇ ಇದು ಸಹ. ಹಾಕಿದ ಕೇಸುಗಳೆಲ್ಲಾ ನಮ್ಮ ಪರವಾಗಿ ಆಗುತ್ತದೆಂದು ಹೇಗೆ ಹೇಳುವುದು? ಸಾಧ್ಯವಾದಷ್ಟು ಫೂಲ್ ಫ್ರೂವ್ ಮಾಡಬೇಕೆನ್ನತಕ್ಕ ಅವರ ಕಳಕಳಿಯೇನಿದೆ ಅದನ್ನು ಗಮನಿಸಿದ್ದೇನೆ, ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಎಫ್.ಐ.ಆರ್. ಮತ್ತು ಚಾರ್ಜ್‌ಶೀಟ್ ಮಧ್ಯೆ ಏನು ನಡೆಯುತ್ತದೆ? ಚಾರ್ಜ್‌ಶೀಟ್ ಮತ್ತು ಜಡ್ಜ್‌ಮೆಂಟ್ ಮಧ್ಯೆ ಏನು ನಡೆಯುತ್ತದೆ? what is the composition of the vigilance? ಇದರ ಬಗ್ಗೆ ತಾವು ಸಾಕಷ್ಟು ತಿಳಿಸಿದ್ದೀರಿ, ನಾನು ನಿಮಗೆ ಅಭಿನಂದಿಸುತ್ತಾ ಇದೆಲ್ಲವನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಲು ಇಷ್ಟಪಡುತ್ತೇನೆ.

ಶ್ರೀ ಎ.ರಾಮದಾಸ್: ಮೀಸಲಾತಿ ವಿಚಾರದಲ್ಲಿ ನಾನು ಕೋರ್ಟ್‌ಗೆ ಹೋದೆ, ಏನಾಯಿತು ಎಂದು ತಾವು ಹೇಳಿದ್ದೀರಿ. ನಾನು ಹಾಗೆ ಹೋಗಿದ್ದರಿಂದ ಕೊನೆಯ ಪಕ್ಷ ಗೈಡ್‌ಲೈನ್ಸ್ ಆದರೂ ಮಾಡಿದ್ದೀರಲ್ಲಾ ಅದು ಯಶಸ್ಸು ತಾನೇ?

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''2001ರ ವಿದ್ಯುಚ್ಛಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 3ರವರೆಗೆ

ಅಧ್ಯಕ್ಷರು: ''ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ,

ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೆ, ''2001ನೇ ಸಾಲಿನ ವಿದ್ಯುಚ್ಚಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು'' ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''2001ನೇ ಸಾಲಿನ ವಿದ್ಯುಚ್ಚಕ್ತಿ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಮತ್ತೆ ಮಧ್ಯಾಹ್ನ ಮೂರು ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 2 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 3-30ಕ್ಕೆ ಪುನರ್ ಸಮಾವೇಶಗೊಂಡಿತು, ಸಭಾಧ್ಯಕ್ಷರು ಶ್ರೀ ಎಂ.ಪಿ.ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ii) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ 2001 ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಂ.ಶಿವಣ್ಣ(ಹಣಕಾಸು ಇಲಾಖಾ ರಾಜ್ಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) ಮಾನ್ಯ ಅಧ್ಯಕ್ಷರೆ, ''2001ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ''